ಶ್ರೀ ಬಿ.ಹೆಚ್. ಬನ್ನಿಕೋಡ್ :- ಈ ರೀತಿಯ ಸಚಿವರ ಹೇಳಿಕೆಯಿಂದ ಯಾರಿಗೂ ತೃಪ್ತಿ ತರಲಾರದು. ಅವರಿಗೆ ಇಚ್ಛೆ ಇದೆ, ಅದರ ಅವಶ್ಯಕತೆಯನ್ನು ಮನಗಂಡಿದ್ದಾರೆ. ಜಿಲ್ಲಾ ಪರಿಷತ್‌ನವರು ಮಾಡಿದ್ದಾರೆ. ಸಿಬ್ಬಂದಿಯನ್ನು ಮಂಜೂರು ಮಾಡುತ್ತೇವೆನ್ನುವ ಸದೀಚ್ಛೆಯನ್ನು ವ್ಯಕ್ತಪಡಿಸುತ್ತಿದ್ದೀರಿ ಏನಹ ಇಲ್ಲಿಯವರೆಗೆ ಆದಂಥ ವಿಳಂಬದ ಬಗ್ಗೆ ಕೂಡಲೇ ಸರ್ಕಾರ ಮಂಜೂರಾತಿ ಕೊಡುತ್ತದೆನ್ನುವ ಮಾತು ಮಾನ್ಯ ಸಚಿವರಿಂದ ಬಂದಿಲ್ಲ. ಅಲ್ಲಿ ಅನಶ್ಯಕತೆಯಿರತಕ್ಕಂಥ ಸಿಬ್ಬಂದಿಯನ್ನು, ಹಣವನ್ನು ಒದಗಿಸಿ ಮಂಜೂರು ಮಾಡುತ್ತೇವೆಂದು ಹೇಳಬೇಕು. ಈಗಾಗಲೇ ಅಲ್ಲಿ ಸುಮಾರು 2-3 ವರ್ಷಗಳಿಂದ ಸಿಬ್ಬಂದಿ ಇಲ್ಲ. ಇದರಿಂದ ಗ್ರಾಮೀಣ ಜನತೆಗೆ ಆಗಿರತಕ್ಕಂಥ ತೊಂದರೆ, ಅದರಲ್ಲೂ ರೈತನ ಸಂಪತ್ತಾಗಿರುವ ಪಶು ಸಂಪತ್ತಿನ ಬಗ್ಗೆ ಸರ್ಕಾರ ಅಲಕ್ಷ್ಯ ಮಾಡುವುದು ಸರಿಯಲ್ಲ. ನಿಜವಾದ ಕಳಕಳಿ ಇದರ ಬಗ್ಗೆ ನಿಮಗೆ ಏನಿದೆ, ಸರ್ಕಾರದ ಮೇಲೆ ತಾವು ಪ್ರಭಾವ ಬೀರಿ ಅವಶ್ಯಕತೆ ಇರತಕ್ಕಂಥ ಪಶು ಚಿಕಿತ್ಸಾ ಕೇಂದ್ರವನ್ನು ಜಿಲ್ಲಾ ಪರಿಷತ್ತಿನ ಮೂಲಕ ಮಂಜೂರು ಮಾಡುತ್ತೇವೆಂದು ಹೇಳಬೇಕು. ಇದನ್ನು ಎಷ್ಟು ದಿವಸಗಳಲ್ಲಿ ಮಾಡುತ್ತೀರೆಂಬುದನ್ನು ತಾವು ಸದನಕ್ಕೆ ತಿಳಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ:- ನಾನು ಈಗಾಗಲೇ ತಿಳಿಸಿರುವಂತೆ ಈ ರಾಜ್ಯದಲ್ಲಿ ಪಶು ಆಸ್ಪತ್ರೆಗಳ ಅವಶ್ಯಕತೆಯಿದೆ. ಈಗ 333 ಪ್ರಾಥಮಿ ಪಶು ಚಿಕಿತ್ಸಾ ಕೇಂದ್ರಗಳಿಗೆ ಸಿಬ್ಬಂದಿಯನ್ನು ಒದಗಿಸಬೇಕಾದರೆ ಕನಿಷ್ಟ ಪಕ್ಷ 15 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅದರಲ್ಲಿ ಒಂದು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಕ್ಕೆ ಎಷ್ಟು ಹಣ ಬೇಕಾಗಬಹುದೆಂಬುದನ್ನು ನೋಡಿದ್ದೇವೆ. ಈ ವರ್ಷ ಅಂದರೆ, 1992-1993 ನೇಸಾಲಿನಲ್ಲಿ ಶ್ರೀಮಾನ್ ವೀರಪ್ಪ ಮೊಯಿಲಿಯವರ ಸರ್ಕಾರ ಅಧಿಕಾರಕ್ಕೆ ಬಂದ ನಂತರ 194 ಹೊಸ ಪಶು ಚಿಕಿತ್ಸಾ ಕೇಂದ್ರಗಳನ್ನು ನಾವು ಮಂಜೂರು ಮಾಡಿದ್ದೇವೆ. ಶ್ರೀಮಾನ್ ವೀರೇಂದ್ರಪಾಟೀಲ್‌ರವರ ಸರ್ಕಾರ ಒಂದು ಸಲ ಕೊಟ್ಟಿದ್ದು ಬಿಟ್ಟರೆ 1980ನೇ ಇಸವಿಯಿಂದ ಒಂದೂ ಪಶು ಚಿಕಿತ್ಸಾ ಪಶು ಚಿಕಿತ್ಸಾ ಕೇಂದ್ರವನ್ನು ಕೊಟ್ಟಿರಲಿಲ್ಲ. ಈಗ 1993-94 ನೇ ಸಾಲಿಗೆ 200 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಕೊಡಬೇಕೆಂದು ಆಲೋಚಿಸಿದ್ದೇವೆ. ಅದರ ಜೊತೆಗೆ ಇದನ್ನು ಸಹ ಹಂತ ಹಂತವಾಗಿ ಮಂಜೂರು ಮಾಡುವುದಕ್ಕೆ ನನಗೂ ಖಂಡಿತ ಮನಸ್ಸಿದೆ, ಸರ್ಕಾರಕ್ಕೂ ಇದೆ. ಮಾನ್ಯ ಸದಸ್ಯರು ಹೇಳಿರುವುದರಲ್ಲಿ, ಸತ್ಯಾಂಶವಿದೆ. ಪಶು ಸಂಪತ್ತಿನ ರಕ್ಷಣೆ ಬಹಳ ಮುಖ್ಯವಾದುದು. ಆದುದರಿಂದ, ನನಗೆ ಸ್ವಲ್ಪ ಕಾಲಾವಕಾಶ ಕೊಡಿ. ಅದರ ಜೊತೆಗೆ ನಿಮ್ಮನ್ನು ಕರೆಯುತ್ತೇವೆ. ಹಣಕಾಸು ಇಲಾಖೆಯವರ ಜೊತೆ ಕುಳಿತು ಸಮಾಲೋಚಿಸಿ ಈ ಕುರಿತು ಆದಷ್ಟು ಬೇಗ ಕ್ರಮ ಕೈಗೊಳ್ಳುವಂತೆ ಪ್ರಯತ್ನ ಮಾಡೋಣ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು

1. ಕರಾವಳಿ ಪ್ರದೇಶದ ಕೊಂಕಣ ರೈಲ್ವೆಯ ಕೆಲಸ ಸ್ಥಗಿತ :

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :- ಮಾನ್ಯ ಸಭಾಧ್ಯಕ್ಷರೆ, ನಾನು ಒಂದು ಪ್ರಮುಖವಾದಂಥ ವಿಷಯದ ಬಗ್ಗೆ ಸರ್ಕಾರದ ಗಮನ ಸೆಳೆಯಬೇಕೆಂದು ತಮ್ಮ ಪರವಾನಗಿ ಬೇಡಿ ಮಾತನಾಡುವುದಕ್ಕೆ ಇಲ್ಲಿ ನಿಂತಿದ್ದೇನೆ. ನಮ್ಮ ರಾಜ್ಯದ ಕರಾವಳಿ ಪ್ರದೇಶದ ಜನರಿಗೆ ಅತ್ಯಂತ ಉಪಕಾರಿಯಾದಂಥ ಕೊಂಕಣ ರೈಲ್ವೆ ಕೆಲಸವನ್ನು ಸ್ಥಗಿತಗೊಳಿಸಬೇಕೆಂದು ಕೇಂದ್ರ ಸರ್ಕಾರದವರು ನಿರ್ಧಾರ ಮಾಡಿ ಈಗಾಗಲೇ ಸ್ಥಗಿತಗೊಳಿಸಿರುವುದು ಅತ್ಯಂತ ದುಃಖದ ಹಾಗೂ ಖಂಡನೀಯವಾದ ವಿಚಾರವೆಂದು ನಾನು ಹೇಳಬಯಸುತ್ತೇನೆ. ಒಂದು ವಾರದ ಹಿಂದೆ ನಮ್ಮ ಪ್ರಧಾನಿಯವರು ಉಡುಪಿ ರೈಲು ನಿಲ್ದಾಣವನ್ನು ಹಾಗೂ ಉಡುಪಿ-ಮಂಗಳೂರು ಮಧ್ಯೆ ಸಂಚರಿಸತಕ್ಕಂಥ ರೈಲನ್ನು ಉದ್ಘಾಟನೆ ಮಾಡಿ ಕರ್ನಾಟಕದ ಜನರಿಗೆ ಮತ್ತು ಕರಾವಳಿ ಪ್ರದೇಶದಲ್ಲಿರತಕ್ಕಂಥ ಎಲ್ಲಾ ಜನರಿಗೆ 1994ರ ಅಕ್ಟೋಬರ್ 2ನೇ ತಾರೀಖಿನೊಳಗಾಗಿ ಈ ಒಂದು ಯೋಜನೆಯನ್ನು ಪೂರೈಸುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. 1500 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಈ ರೈಲ್ವೆ

ಯೋಜನೆಯನ್ನು ಯಾವುದೇ ಕಾರಣದಿಂದಲೂ ಕೂಡ ಸ್ಥಗಿತಮಾಡುವುದಿಲ್ಲ, ಇದರ ಕೆಲಸ ತೀವ್ರಗತಿಯಲ್ಲಿ ಆಗುತ್ತದೆ ಎನ್ನತಕ್ಕ ಮಾತನ್ನು ಹೇಳಿದ್ದರು, ಅದು ತಮಗೆಲ್ಲರಿಗೂ ನೆನಪಿನಲ್ಲಿರಬೇಕು. ಇದಾದ ನಂತರ ಕೇಂದ್ರ ಸರ್ಕಾರ ಯಾವುದೋ ಒತ್ತಡಕ್ಕೆ ಮಣಿದು ಇದರ ಕೆಲಸವನ್ನು ನಿಲ್ಲಿಸಿದ್ದಾರೆ, ಇದರಲ್ಲಿ ಅರ್ಥವಿಲ್ಲ, ಕೇಂದ್ರ ಸರ್ಕಾರದಲ್ಲಿ ಮಂತ್ರಿಗಳಾಗಿರತಕ್ಕ ಎಡ್ವರ್ಡ್ ಫೆರೇರೋ ರವರಿಗೂ ಗೋವಾದ ಮುಖ್ಯಮಂತ್ರಿಗಳಿಗೂ ರಾಜಕೀಯವಾಗಿ ಭಿನ್ನಾಭಿಪ್ರಾಯವಿರುವುದೇ ಈ ಕೆಲಸವನ್ನು ನಿಲ್ಲಿಸಲು ಕಾರಣ ಎಂದು ಪ್ರಮುಖವಾದ ಪತ್ರಿಕೆಗಳಲ್ಲೆಲ್ಲಾ ವರದಿಯಾಗಿದೆ, ಅದನ್ನು ನಾವು ನೋಡುತ್ತಿದ್ದೇವೆ, ಈ ಕಾರ್ಯಕ್ಕೆ ರೂವಾರಿಯಾಗಿದ್ದ ಮಾನ್ಯ ಜಾರ್ಜ್‌ಫರ್ನಾಂಡಿಸ್‌ರವರೂ ಸಹ ಇದರ ಬಗ್ಗೆ ತೀವ್ರವಾದ ಕಳಕಳಿಯನ್ನು ವ್ಯಕ್ತಪಡಿಸಿ ಅವರು ಪಾರ್ಲಿಮೆಂಟ್‌ನಲ್ಲಿ ಈ ಕಾರ್ಯವನ್ನು ತೆಗೆದುಕೊಳ್ಳಬೇಕು ಎಂದು ಈ ಸದನದ ಹೊರಗಡೆ ಸಹ ಪ್ರಸ್ತಾಪ ಮಾಡಿದ್ದಾರೆ, ನಾನಾದರೂ ಸಹ ಈ ಸರ್ಕಾರದಲ್ಲಿ ಕೇಳಬಯಸುವುದೇನೆಂದರೆ ಈ ಕೆಲಸವನ್ನು ಸ್ಥಗಿತಗೊಳಿಸುವ ಬಗ್ಗೆ ಕೇಂದ್ರ ಸರ್ಕಾರದವರು ರಾಜ್ಯಸರ್ಕಾರಕ್ಕೆ ಏನಾದರೂ ತಿಳಿಸಿದ್ದರೆ? ಮಾನ್ಯ ಉಪ ಮುಖ್ಯಮಂತ್ರಿಗಳು ಸದನದಲ್ಲಿ ಇದ್ದಾರೆ, ಅವರು ಮಾನ್ಯ ಪ್ರಧಾನಿಯನ್ನು ಭೇಟಿ ಮಾಡಿರಬಹುದು, ಅವಾಗ ಅವರು ಈ ವಿಚಾರದಲ್ಲಿ ಪ್ರಸ್ತಾಪವೇನಾದರೂ ಮಾಡಿದ್ದಾರೆಯೆ? ಈ ಕೆಲಸ 2-3 ವರ್ಷದಲ್ಲಿ ಮುಗಿಯಬೇಕಾಗಿತ್ತು, ನಮಗೆ ಗೊತ್ತಿರುವ ಹಾಗೆ ಬಾಂಬೆ ಮತ್ತು ಕೇರಳದವರೆಗಿನ ಕರಾವಳಿ ಪ್ರದೇಶದ ಜನರಿಗೆ ನ್ಯಾಷನಲ್ ಹೈವೇಯನ್ನು ಮಾಡಿದರೂ ಸಹಿತ ಅಲ್ಲಿ ವಿಪರೀತವಾಗಿ ಟ್ರಾಫಿಕ್ ಇದೆ. ನಮ್ಮ ರಾಜ್ಯವಾಗಲಿ, ಕೇರಳ ರಾಜ್ಯವಾಗಲಿ ಬಾಂಬೆ ಮತ್ತು ಮಹಾರಾಷ್ಟ್ರಕ್ಕೆ ಹೋಗಬೇಕಾಗಿದ್ದರೆ ಇದೊಂದೇ ಜೀವನಾಡಿಯಾಗಿದ್ದ ರೈಲ್ವೆ. ತಾವು ಕೇಂದ್ರದಲ್ಲಿ ಮಂತ್ರಿಗಳಾಗಿದ್ದವರು ತಮಗೆ ಇದರ ಬಗ್ಗೆ ಸಾಕಷ್ಟು ತಿಳುವಳಿಕೆ ಇದೆ, ಇದರ ಮಹತ್ವ ಸಹಿತ ತಮಗೆ ಗೊತ್ತಿದೆ, ಆದುದರಿಂದ ತತ್‌ಕ್ಷಣ ನಮ್ಮ ಸದನದ ಮೂಲಕ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತರಬೇಕು, ತಮಗೆ ಗೊತ್ತಿರುವ ಹಾಗೆ 1992ನೇ ಇಸವಿಯಿಂದ 1992ರವರೆಗೆ ಉತ್ತರ ಪ್ರದೇಶ, ಬಿಹಾರ್, ಮಧ್ಯಪ್ರದೇಶ, ತಮಿಳುನಾಡು ಮತ್ತು ಒರಿಸ್ಸಾಗಳಲ್ಲಿ ಸ್ಟೇಟ್ ಹೈವೇಯನ್ನು ನ್ಯಾಷನಲ್ ಹೈವೇ ಎಂದು ಪರಿವರ್ತನೆ ಮಾಡಿದಂಥ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ಅರ್ಧ ಕಿ.ಮೀ. ರಸ್ತೆ ನ್ಯಾಷನಲ್ ಹೈವೇಯನ್ನು ಮಾಡಿಸಲಿಲ್ಲ, ತಾವು ಅದರ ಬಗ್ಗೆ ಪ್ರಯತ್ನ ಮಾಡಿದ್ದೀರಿ ಅದು ನನಗೆ ಗೊತ್ತು ತಾವು ಕೇಂದ್ರದ ಮಂತ್ರಿಗಳಾಗಿದ್ದಾಗ ನಾನು ನಿಮ್ಮನ್ನು ಭೇಟಿ ಮಾಡಿದ್ದೆ ಆಗ ತಾವು ಇಲ್ಲಾ, ಇಲ್ಲ, ನಾವು ಇಲ್ಲಿ ನ್ಯಾಷನಲ್ ಹೈವೇಯನ್ನು ಮಾಡಿಸಲು ಪ್ರಯತ್ನ ಮಾಡುತ್ತಿದ್ದೇವೆ, ಮಂಡ್ಯ ಕನಕಪುರ ಮತ್ತು ಮಳವಳ್ಳಿ ರಸ್ತೆಗೆ ಸಂಬಂಧಪಟ್ಟಂತೆ ತಲ್ಚೇರಿಯವರೆಗೆ ನ್ಯಾಷನಲ್ ಹೈವೇಯನ್ನು ಮಾಡಿಸೋಣ ಎನ್ನತಕ್ಕ ಮಾತನ್ನು ಹೇಳಿದ್ದಿರಿ, ಆದರೆ ಇವತ್ತಿನವರೆಗೂ ಅದು ಆಗಿಲ್ಲ, ಇಂಥ ಸಂದರ್ಭದಲ್ಲಿ ಅಪರೂಪಕ್ಕೆ ನಮಗೇನೋ ಕೊಂಕಣರೈಲ್ವೆ ಆಗುತ್ತದೆ ಎನ್ನತಕ್ಕ ಸಂದರ್ಭ ಬಂದಾಗ ಗೋವಾದಲ್ಲಿರತಕ್ಕ ಪಟ್ಟಭದ್ರಹಿತಾಸಕ್ತಿಗಳು ಏನು ಹೇಳುತ್ತಾರೆಂದರೆ: ನಮಗೆ ಬೆಲೆಬಾಳುವ ಲ್ಯಾಂಡ್ ಇದೆ, ಕಟ್ಟಡಗಳಿವೆ, ನಮ್ಮದೊಂದು ಯುನಿಕ್ ಕಲ್ಚರ್ ಇದೆ, ಇವೆಲ್ಲವನ್ನು ಸರ್ವೆ ಮಾಡುವಾಗ ಯುನಿಕ್ ಕಲ್ಚರ್, ಕಟ್ಟಡಗಳು ಇರತಕ್ಕದ್ದು re-connoiesure survey ನಲ್ಲಿ ಗೊತ್ತಾಗುತ್ತದೆ, re-connoiesure survey ಆದ ಮೇಲೆ ಪ್ರಿಲಿಮಿನರಿ ಸರ್ವೆಯಾಗಿ ಪ್ರಾಜೆಕ್ಟ್ ರಿಪೋರ್ಟ್ ಆಗಿ ಪ್ಲಾನಿಂಗ್ ಕಮಿಷನ್‌ನಲ್ಲಿ ಅಪ್ರೂವ್ ಆಗಿ ಫಾರಿನ್ ಕಂಟ್ರಿಗಳಿಂದ ಸಹಾಯ ಧನವನ್ನು ತೆಗೆದುಕೊಂಡು ಮತ್ತು ಕೇಂದ್ರ ಸರ್ಕಾರದವರು ತೆಗೆದುಕೊಂಡಿರುವಂಥ ಸಾಲದ ಮೇಲೆ ಒಂದು ದಿನಕ್ಕೆ 17 ಲಕ್ಷ ರೂಪಾಯಿ ಬಡ್ಡಿಯನ್ನು ಹಾಕತಕ್ಕ ಸಂದರ್ಭ ಬಂದಿರುವಾಗ ಇದು ಸ್ಥಗಿತವಾಗುತ್ತದೆ ಎಂದು ಹೇಳಿದರೆ ಇದರ ಅರ್ಥವೇನು? ಆದುದರಿಂದ ಇದರ ಬಗ್ಗೆ ನಾವು ಒತ್ತಾಯವನ್ನು ತರೋಣ, ತಮಗೆ ಇದರ ಬಗ್ಗೆ ಕೇಂದ್ರ ಸರ್ಕಾರದಿಂದ ಏನಾದರೂ ಸೂಚನೆ ಬಂದಿದೆಯೆ? ಆ ರೀತಿ ಬಂದಿದ್ದರೆ ತಾವು ಅದರ ಬಗ್ಗೆ ತೆಗೆದುಕೊಂಡಿರುವ ಕ್ರಮವೇನು? ತಾವು ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅದರ ಬಗ್ಗೆ ಹೇಳಬೇಕಾಗುತ್ತದೆ. ಇಡೀ ರಾಜ್ಯದ ಜನತೆ ನಾವು ನೀವೆಲ್ಲರೂ ಸೇರಿ ಇದರ ಬಗ್ಗೆ ತೀವ್ರವಾಗಿ ಪ್ರತಿಭಟನೆ ಮಾಡಬೇಕಾಗುತ್ತದೆ. ಆದುದರಿಂದ ಈ ಕೊಂಕಣ ರೈಲ್ವೆಯ ಕೆಲಸವನ್ನು ಸ್ಥಗಿತ ಮಾಡಬಾರದು ಎನ್ನತಕ್ಕ

ನಿರ್ಣಯವನ್ನು ಈ ಸದನದಲ್ಲಿ ಮಾಡಿ,ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ತರಬೇಕು, ಯಾವುದೇ ಕಾರಣದಿಂದಲೂ ಸಹಿತ ಈ ಕೆಲಸವನ್ನು ಸ್ಥಗಿತ ಮಾಡುವುದಕ್ಕೆ ಅವಕಾಶ ಕೊಡಬಾರದು, ಇದಕ್ಕೆ ಸರ್ಕಾರ ತಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕು. ಈಗಾಗಲೆ ಸರ್ಕಾರ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ಎನ್ನುವ ಬಗ್ಗೆ ತಿಳಿಸಬೇಕು. ಕೇಂದ್ರದ ಈ ಒಂದು ವಿಚಾರ ಏನು ಇದೆ ಅದನ್ನು ಅತ್ಯಂತ ನೋವಿನಿಂದ ಖಂಡಿಸಬೇಕಾಗುತ್ತದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಇದರ ಬಗ್ಗೆ ಸರ್ಕಾರದ ನೀತಿಯನ್ನು ಸ್ಪಷ್ಟ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಿಂಧ್ಯರವರು ಕೇಂದ್ರ ಸರ್ಕಾರದವರು ಏನು ಈ ಕೊಂಕಣ ರೈಲ್ವೆಯ ಕೆಲಸವನ್ನು ಸ್ಥಗಿತ ಮಾಡಿದ್ದಾರೆ ಮತ್ತು ಅದರ ಬಗ್ಗೆ ಆದೇಶವನ್ನು ಹೊರಡಿಸಿದ್ದಾರೆ ಎಂಬುದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದು ನಿಜವಾಗಿಯೂ ಕೂಡ ಆಶ್ಚರ್ಯದ ಸಂಗತಿಯಾಗಿದೆ. ಇದರ ಬಗ್ಗೆ ಸದನದಲ್ಲಿ ಕೆಲವು ಸದಸ್ಯರ ಹತ್ತಿರ ಮಾಹಿತಿ ಇರಬಹುದು ಮತ್ತು ಕೆಲವರ ಹತ್ತಿರ ಮಾಹಿತಿ ಇಲ್ಲದಿರಬಹುದು, ಆದರೆ ಈ ಸದನದಲ್ಲಿರತಕ್ಕ ಎಲ್ಲಾ ಸದಸ್ಯರೂ ಸಹ ಕೊಂಕಣ ರೈಲ್ವೆ ಮಾರ್ಗದಿಂದ ನಮ್ಮ ರಾಜ್ಯಕ್ಕೆ ಎಷ್ಟು ಉಪಯೋಗವಾಗುತ್ತದೆ, ಕಳೆದ ಅನೇಕ ವರ್ಷಗಳಿಂದ ಕೇಂದ್ರದಿಂದ ರೈಲ್ವೆ ಮಾರ್ಗವನ್ನು ನಮಗೆ ಕೊಡುವುದರ ಬಗ್ಗೆ ಎಷ್ಟರ ಮಟ್ಟಿಗೆ ಅನ್ಯಾಯವಾಗಿದೆ ಎನ್ನುವ ಬಗ್ಗೆ ನಾವು ಪುನಃ ಇಲ್ಲಿ ಚರ್ಚೆ ಮಾಡತಕ್ಕ ಅಗತ್ಯವಿಲ್ಲ, ಅದು ಎಲ್ಲರಿಗೂ ಗೊತ್ತಿರತಕ್ಕ ಸಂಗತಿ. ಅದಕ್ಕೋಸ್ಕರ ಕೇಂದ್ರ ಸರ್ಕಾರ ಈ ಕೊಂಕಣ ರೈಲುಮಾರ್ಗದ ಒಂದು ಕೆಲಸವನ್ನು ಆದಷ್ಟು ಬೇಗ ಮಾಡುವುದಕ್ಕೆ ಅಗತ್ಯವಿರುವಂಥ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದಂಥವರು ಏಕಾಏಕಿ ಗೋವಾದಲ್ಲಿರತಕ್ಕಂಥ ಕೆಲವು ಪಟ್ಟಭದ್ರ ಹಿತಾಶಕ್ತಿಗಳ ಒಂದು ಒತ್ತಡಕ್ಕೆ ಮಣಿದು ಈಗಾಗಲೇ ತಡೆ ಆಜ್ಞೆಯನ್ನು ಕೊಟ್ಟಿರುವುದು ಇದು ಗೊತ್ತಿರುವಂಥ ಸಂಗತಿ. ಇದು ಗೊತ್ತಾದ ತಕ್ಷಣ ರಾಜ್ಯ ಸರ್ಕಾರದವರು ಏನಾದರೂ ಕೇಂದ್ರ ಸರ್ಕಾರದ ಪ್ರಮುಖರನ್ನು ರೈಲ್ವೆಗೆ ಸಂಬಂಧಪಟ್ಟ ಪ್ರಮುಖರನ್ನು ಅಥವಾ ಪ್ರಧಾನಿಯವರನ್ನು ಭೇಟಿಮಾಡಿದ್ದೀರಾ, ಪತ್ರವ್ಯವಹಾರವನ್ನು ನಡೆಸಿದ್ದೀರಾ? ಈ ರಾಜ್ಯಕ್ಕೆ ಇಷ್ಟು ದೊಡ್ಡ ಅನ್ಯಾಯವಾಗುತ್ತಿದ್ದರೂ ಸಹ ನಮ್ಮ ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳಾಗಲಿ ಪ್ರಮುಖರಾಗಲಿ ಕೈಕಟ್ಟಿ ಕುಳಿತಿರುವುದಕ್ಕೆ ಕಾರಣವೇನು? ಇದನ್ನೂ ಸಹ ಸದನಕ್ಕೆ ತಾವು ತಿಳಿಸಬೇಕಾಗುತ್ತದೆ. ಇಲ್ಲದಿದ್ದರೆ ಒಂದು ಸಾರಿ ತಡೆಯಾದರೆ ಇವತ್ತು ಇದಾಗಬೇಕೆಂದು ಹೇಳಿ ಸರ್ವೆಯಾಗಿ ಅದಕ್ಕೆ ಬೇಕಾದ ಹಣವನ್ನು ತೆಗೆದಿಟ್ಟು, ಯಾವ ಮಾರ್ಗದಲ್ಲಿ ಅದು ಹೋಗಬೇಕೆಂದು ಕೆಲಸ ಪ್ರಾರಂಭವಾಗಿರತಕ್ಕಂಥ ಸಂದರ್ಭದಲ್ಲಿ ಇವತ್ತು ಈ ಕೆಲಸವೇನಾದರೂ ಸ್ಥಗಿತವಾದರೆ ನಿಜಕ್ಕೂ ರಾಜ್ಯದ ಜನತೆಗೆ ಬಹಳ ದೊಡ್ಡ ಅನ್ಯಾಯವಾದಂತಾಗುತ್ತದೆ. ಗೋವಾದಲ್ಲಿರತಕ್ಕಂಥ ಅನೇಕ ಜನ ಪ್ರಭಾವಿಯುತ ವ್ಯಕ್ತಿಗಳು ಕೇಂದ್ರ ಸರ್ಕಾರದವರ ಮನಸ್ಸನ್ನು ಒಲಿಸಿ ಇದಕ್ಕೆ ತಡೆಯಾಜ್ಞೆ ಹೊರಡಿಸುವುದರಲ್ಲಿ ಯಶಸ್ವಿಯಾಗಿದ್ದಾರೆ, ನಮ್ಮ ರಾಜ್ಯ ಕೈಕಟ್ಟಿಕೊಂಡು ಕುಳಿತಿದೆ. ಇಂಥ ಒಂದು ಪ್ರಮುಖವಾದ ವಿಷಯ ಪ್ರಸ್ತಾಪವಾಗಬೇಕೆಂದು ತಮ್ಮ ಕೊಠಡಿಗೆ ಬಂದಾಗ ಇದರ ಮಹತ್ವವನ್ನು ಅರ್ಥಮಾಡಿಕೊಂಡು ಸನ್ಮಾನ್ಯ ಸಿಂಧ್ಯಾರವರಿಗೆ ನಮಗೂ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಅನೇಕ ಜನರೂ ಕೂಡ ಮಾತನಾಡಬೇಕೆಂದಿರುವುದು ಸ್ವಾಭಾವಿಕವಾಗಿದೆ. ದಯವಿಟ್ಟು ಬಹುಶಃ ಇಲ್ಲಿ ಮಾತನಾಡುವುದಕ್ಕಿಂತ ಸ್ಥಗಿತವಾಗಿರುವುದು ನಿಜವೇ, ರಾಜ್ಯ ಸರ್ಕಾರದವರು ಇದರ ಬಗ್ಗೆ ಪತ್ರ ಬರೆದಿದ್ದರೋ, ಹಾಗಿದ್ದರೆ ಸರ್ವಾನುಮತದಿಂದ ಒಂದು ನಿರ್ಣಯವನ್ನು ಈ ಸದನದಲ್ಲಿ ಪಾಸ್‌ಮಾಡಿ ತಕ್ಷಣ ಈ ಒಂದು ತಡೆಯಾಜ್ಞೆಯನ್ನು ಕೇಂದ್ರ ಸರ್ಕಾರದವರು ವಾಪಸ್ ಪಡೆಯಬೇಕು, ಆದಷ್ಟು ಬೇಗ ಈ ಕೊಂಕಣ ರೈಲ್ವೆ ಮಾರ್ಗದ ಕೆಲಸ ಪೂರ್ಣವಾಗುವುದಕ್ಕೆ ಕೇಂದ್ರ ಸರ್ಕಾರ ವಿಶೇಷವಾದಂಥ ಗಮನವನ್ನು ಕೊಡಬೇಕೆಂದು ಹೇಳಬೇಕಾಗುತ್ತದೆ. ಅದಕ್ಕಿಂತ ಮುಂಚೆ ಇದಕ್ಕೆ ಬೇಕಾದಂಥ ವಿವರವನ್ನು ಮಾಹಿತಿಯನ್ನು ರಾಜ್ಯಸರ್ಕಾರದವರು ಒದಗಿಸಿಕೊಡಬೇಕು. ರಾಜ್ಯ ಸರ್ಕಾರ ಇದುವರೆಗೆ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದರ ಬಗ್ಗೆ ತಿಳಿಸಬೇಕೆಂದು ತಮ್ಮ ಮೂಲಕ ಸಂಬಂಧಪಟ್ಟವರನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ :- ಸನ್ಮಾನ್ಯ ಅಧ್ಯಕ್ಷರೇ, ಇದು ಬಹಳ ವರ್ಷದ ಒಂದು ಕನಸು ಕರಾವಳಿಯಲ್ಲಿ ಕೊಂಕಣ ರೈಲ್ವೆಯಾಗಬೇಕೆಂಬುದು, ಬಹಳ ವರ್ಷಗಳಿಂದ ಡಿಮಾಂಡ್ ಇತ್ತು. ಕೇರಳ, ಕರ್ನಾಟಕ ಗೋವಾ ಮತ್ತು ಮಹಾರಾಷ್ಟ್ರ. ಬಹಳ ವರ್ಷಗಳ ಕನಸನ್ನು ಆ ಸಮಯದಲ್ಲಿ ಕೇಂದ್ರದಲ್ಲಿ ಇದ್ದ ಮಾನ್ಯ ವಿ.ಪಿ.ಸಿಂಗ್ ಸರ್ಕಾರ ನನಸು ಮಾಡಿತ್ತು. ಮುಖ್ಯವಾಗಿ ನಾವು ಮಾನ್ಯ ಸಿಂಧ್ಯೆರವರು ಹೇಳಿದಹಾಗೆ ಶ್ರೀ ಜಾರ್ಜ್‌ಫರ್ನಾಂಡೀಸ್‌ರವರು ಅದೇ ಪ್ರಕಾರ ಫೈನಾನ್ಸ್ ಮಿನಿಸ್ಟರಾಗಿದ್ದ ಮಾನ್ಯ ಮಧುದಂಡವತೆಯವರು ಮತ್ತು ಡೆಪ್ಯುಟಿ ಚೇರ್‌ಮನ್ ಫಾರ್ ಪ್ಲಾನಿಂಗ್ ಕಮಿಷನ್ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮೂರು ಜನ ಇದರಲ್ಲಿ ಹೆಚ್ಚಿನ ಅಭಿರುಚಿಯನ್ನು ತೆಗೆದು ಕೊಂಡು ಈ ಒಂದು ಕನಸನ್ನು ನನಸುಮಾಡಲಿಕ್ಕೆ ಪ್ರಯತ್ನ ಮಾಡಿದ್ದರು ಒಳ್ಳೆಯ ಅಧಿಕಾರಿಗಳನ್ನು ಕೊಟ್ಟರು. ಅದರ ನಂತರ ಬಂದ ಮಾನ್ಯ ನರಸಿಂಹರಾಯರ ಸರ್ಕಾರವು ಒಳ್ಳೆಯ ಸಪೋರ್ಟ್‌ನ್ನು ಕೊಟ್ಟಿದೆ. ನಾವು ಇಲ್ಲಿ ಮಾನ್ಯ ಜಾಫರ್ ಶರೀಫ್‌ರನ್ನು ಮೆಚ್ಚಬೇಕು. ಅವರು ಕರ್ನಾಟಕದ ಸೇವೆಯನ್ನು ಏನು ಮಾಡಿದ್ದಾರೆ ಆರೀತಿ ಯಾವ ಒಬ್ಬ ರೈಲ್ವೆ ಸಚಿವರೂ ಮಾಡಿಲ್ಲ. ಆದರಲ್ಲೂ ಕೊಂಕಣದ ರೈಲ್ವೆವಿಚಾರದಲ್ಲಿ ನಾನು ಅವರ ಜೊತೆ ಪ್ರಸ್ತಾಪ ಮಾಡಿದಾಗ, ಆದಷ್ಟು ಬೇಗ ನಾವು ಮುಗಿಸುತ್ತೇವೆಂದು ಹೇಳಿದ್ದರು.

1994ರ ಒಳಗಾಗಿ ಈ ಪ್ರಾಜೆಕ್ಟ್ ಮುಗಿಯಬೇಕಾಗಿದೆ. ಇಡೀ ಕರಾವಳಿಯ ಲೈಫ್ ಇದರ ಮೇಲೆ ಡಿಪೆಂಡ್‌ಆಗಿದೆ. ಇಡೀ ಕರಾವಳಿಯ ಡೆವಲಪ್‌ಮೆಂಟ್, ಪ್ರೋಗ್ರೆಸ್ ಎಕಾನಮಿಕ್ ಆಕ್ಟಿವಿಟೀಸ್ ಇದರ ಮೇಲೆ ಡಿಪೆಂಡ್ ಆಗಿದೆ. ಇವತ್ತು ಇದು ಯಾರ ಗಮನಕ್ಕೂ ಬಂದಿಲ್ಲ. ಪ್ರಧಾನಿಯವರು ಏನೂ ಕಾರಣವಿಲ್ಲದೆ ಇದಕ್ಕೆ ಒಂದು ತಡೆಯಾಜ್ಞೆನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ಜಾಫರ್‌ಶರೀಫರವರಿಗೂ ಗೊತ್ತಿಲ್ಲ, ಅವರನ್ನು ಕನ್‌ಸಲ್ಟ್ ಕೂಡ ಮಾಡಲಿಲ್ಲ, ತಡೆಯಾಜ್ಞೆಯನ್ನು ಕೊಟ್ಟಿದ್ದಾರೆ. ಏತಕ್ಕೆ ತಡೆಯಾಜ್ಞೆಯನ್ನು ಕೊಟ್ಟರು? ನಾನು ನಿಮ್ಮ ಪಕ್ಷದ ಆಂತರಿಕ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ. ಆದರೆ ಫ್ಯಾಕ್ಟ್‌ನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. The fight between the Chief Minister and Mr,Edward Falerio. Ravi Naik, Chief Minister of Goa, is committed to this line of alignment. ಅದೇ ಪ್ರಕಾರ ಕೊಂಕಣರೈಲ್ವೆ ಆಗಬೇಕೆಂದು ಗೋವಾ ಮುಖ್ಯಮಂತ್ರಿ ರವಿನಾಯಕ್ ಹೇಳುತ್ತಿದ್ದಾರೆ. ಆದರೆ ಕೇಂದ್ರದಲ್ಲಿರತಕ್ಕಂಥ ಮಾನ್ಯ ಸಚಿವರಾದ ಯಡ್ವರ್ಡ್ ಫೆಲೆರಿಯೋರವರು ಗೋವಾದಲ್ಲಿ ಚರ್ಚೆ ಮುಖಾಂತರ ಎಜಿಟೇಷನ್ ಶುರುಮಾಡಿದ್ದಾರೆ. Churchil Alemax, former Chief Minister ಅವರು ಸಹ ಇದಕ್ಕ ಸಪೋರ್ಟ್ ಕೊಟ್ಟಿಲ್ಲ. ಗೋವಾದಲ್ಲಿ ಹಂಗರ್ ಸ್ಟ್ರೈಕ್ ನಡೆಯಿತು. Lakhs of rupees worth Konkan Railway machineries were burnt.

ಇದಾದನಂತರ ಹಂಗರ್ ಸ್ಟ್ರೈಕ್ ಮಾಡುತ್ತಾರೆಂಬ ಕಾರಣಕ್ಕೆ ನೇರವಾಗಿ ಪ್ರೈಮಿನಿಸ್ಟರ್ ಸ್ಟಾಪ್ ಮಾಡಿದ್ದಾರೆ. ಗೋವಾದಲ್ಲಿ ಈ ಕೆಲಸ ಸ್ಟಾಪ್ ಆದರೂ ಸಹ ಅದರ ಪರಿಣಾಮ ಎಲ್ಲಾ ಕಡೆ ಆಗುತ್ತದೆ. ಮಹಾರಾಷ್ಟ್ರದಲ್ಲಿ ಆಗುತ್ತದೆ, ಕೇರಳದಲ್ಲಿ ಆಗುತ್ತದೆ, ಕರ್ನಾಟಕದಲ್ಲಿ ಆಗುತ್ತದೆ. ಅಲೈನ್‌ಮೆಂಟ್ ಕಂಪ್ಲೀಟ್ ಆಗದೆ ನೀವು ಕೆಲಸ ನಿಲ್ಲಿಸುವುದಕ್ಕಾಗುವುದಿಲ್ಲ. ಕೆಲಸ ನಿಧಾನವಾದರೆ ಎಸ್ಕಲೇಷನ್ ಕಾಸ್ಟ್ ಜಾಸ್ತಿಯಾಗುತ್ತದೆ. ಇವತ್ತು, faction ಫೈಟ್ಸ್ ಏನು ಕಾಂಗ್ರೆಸ್‌ನಲ್ಲಿಗೆ ಇದರಿಂದ ಈ ಪರಿಣಾಮವಾಗಿದೆ. ಯಾವುದೇ ಒಂದು ಒಳ್ಳೆಯ ಕಾರಣದಿಂದ ಅಲ್ಲ. ಏನು ತೋರಿಸುತ್ತದೆಂದರೆ ಪ್ರೈಮಿನಿಸ್ಟರ ವೀಕ್‌ನೆಸ್ ಅನ್ನು ತೋರಿಸುತ್ತದೆ. ಒಪ್ಪುವುದು ಬಿಡುವುದು ಆ ಪ್ರಶ್ನೆ ಬೇರೆ. ಹೇಗೆ ಒಪ್ಪುತ್ತಾರೆ ಅವರು? ಪ್ರಧಾನಿಯವರು, ಹಂಗರ್ ಸ್ಟ್ರೈಕ್ ಮಾಡಿದರೆ ಮಾಡಿಕೊಂಡು ಹೋಗಲಿ ಅಂದರೆ ಇದು ದೇಶದ ಹಿತದ ವಿರುದ್ಧ, ಕೊಂಕಣ ರೈಲ್ವೆಯ ಕಾರ್ಯ ಏನಿದೆ ಆದರ ವಿರುದ್ಧ ಮಾಡುತ್ತಿದಾಜ್ಞೆರೆ ಎಂಬ ಭಾವನೆ ಬರುತ್ತದೆ. ಗೋವಾ ಚೀಫ್ ಮಿನಿಸ್ಟರ್ ಸಪೋರ್ಟ್ ಮಾಡುತ್ತಿಲ್ಲ. ಹಾಗಾಗಿ ಪ್ರೈಮಿನಿಸ್ಟರ್ ಸಪೋರ್ಟ್ ಮಾಡುವ ಅವಶ್ಯಕತೆ ಏನಿತ್ತು? ಅದರೂ ಮಾಡಿದ್ದಾರೆ. ಇವತ್ತು ನಮ್ಮ ರಾಜ್ಯ ಸರ್ಕಾರ ಹೇಳಬಹುದು, ನಾವು ಏನು ಮಾಡುವುದು, ಗೋವಾದಲ್ಲಿ ಸಪೋರ್ಟ್ ಮಾಡಿಲ್ಲ ಎಂದು. This is a Corporation. For the first time an

experiment has been made to draw a line out of formation of a Corporation. Very committed officers are also there.

ಆ ಕಾರ್ಪೊರೇಷನ್‌ನಲ್ಲಿ ಛೇರ್ಮನ್ ಆಗಿ ಒಳ್ಳೆಯ ಅಧಿಕಾರಿ ಇದ್ದಾರೆ. ನಾವು ಹೋದಾಗ ಅವರನ್ನು ಭೇಟಿಯಾಗಿದ್ದೇವೆ. ಅಲ್ಲಿ ಕೆಲಸ ಬಹಳ ಚೆನ್ನಾಗಿ ನಡೆಯುತ್ತಿದೆ. State interest is involved.

ನಮ್ಮ ಹಣ ಅಲ್ಲಿ ಇನವೆಸ್ಟ್ ಆಗಿದೆ. ಬಡ್ಜೆಟ್ ಲೇಟ್ ಆದರೆ ನಾವು ಹೆಚ್ಚು ಹಣವನ್ನು ಕಾಂಟ್ರಿಬ್ಯೂಟ್ ಮಾಡಬೇಕಾಗುತ್ತದೆ. ಆದಕ್ಕೆ ತಾವು ಹಣವನ್ನು ಇಟ್ಟುಕೊಳ್ಳಬೇಕಾಗುತ್ತದೆ. ಮುಖ್ಯ-ಮಂತ್ರಿಗಳು ಮತ್ತು ಉಪ ಮುಖ್ಯ ಮಂತ್ರಿಗಳು ದೆಲ್ಲಿಯಿಂದ ಬಂದಿದ್ದೀರಿ. ಕಾನೂನು ಸಚಿವರಾದ ಹಾರ್ನಳ್ಳಿ ರಾಮಸ್ವಾಮಿಯವರು ಹೋಗಿದ್ದರು. ಇದರ ಬಗ್ಗೆ ತಾವು ಪ್ರಧಾನಿಗಳ ಕಡೆ ಚರ್ಚೆ ಮಾಡಿರಬಹುದು. ನಮ್ಮ ರಾಜ್ಯದ ಹಿತದ ವಿರುದ್ಧ ಡಿಸಿಷನ್ ಇದೆ. ಅದರ ಬಗ್ಗೆ ಏನು ಮಾಡಿದಿರಿ ಎಂದು ಗೊತ್ತಾಗಬೇಕಾಗುತ್ತದೆ. ಈ ಬಗ್ಗೆ ತಾವು ಸದನಕ್ಕೆ ಬೆಳಕು ಚೆಲ್ಲ ಬೇಕಾಗುತ್ತದೆ. ಇದು ಒಂದು ಕಡೆ ಇದ್ದರೆ ಮತ್ತೊಂದು ಸಮಸ್ಯೆ ನಿರ್ಮಾಣವಾಗಿದೆ. ಕೊಂಕಣ ರೈಲ್ವೆಯಲ್ಲಿ ಫಂಡ್ಸ್ ಪ್ರಶ್ನೆ ಬಹಳವಾಗಿದೆ. ಅದರಿಂದ ಕೆಲಸ ಮಂದವಾಗಿದೆ. ಎಷ್ಟೋ ಕೆಲಸ ಕಂಟ್ರಾಕ್ಟರ್‌ಗಳಿಂದ ನಿಧಾನವಾಗಿದೆ. ಮೊನ್ನೆ ಬಡ್ಜೆಟ್ಟಿನಲ್ಲಿ ಕೊಂಕಣ ರೈಲ್ವೆಗೆ 400 ಕೋಟಿ ರೂಪಾಯಿ ಇಟ್ಟಿದ್ದಾರೆ. ಆದರೆ ಹಣ ರಿಲೀಸ್ ಆಗಿಲ್ಲ. Rs.400 crore they have kept for the Konkan railway but money is not released becaused Appropriation bill is to be passed. ಹಾಗಾಗಿ ಹಣ ಕೊಡುವುದಕ್ಕೆ ಸಾಕಷ್ಟು ವಿಳಂಬವಾಗಿದೆ. ಹಣ ಕೊಡುವುದಕ್ಕೆ ಸಿಂಧ್ಯರವರು ಮತ್ತು ಎಡಿಯೂರಪ್ಪನವರು ಸೂಚನೆ ಮಾಡಿದ ಪ್ರಕಾರ We should resolve here that immediately work should start and the Prime Minister should withdraw the stay. ನಮ್ಮ ಪ್ರಧಾನಿಯವರು ಮಾಡಿದ್ದಾರೆ, ಅದರಿಂದ ನಮಗೆ ಏನೋ ಗಂಡಾಂತರ ಬರಬಹುದೆಂದು ನಾವು ಹೆದರುವ ಕಾರಣ ಇಲ್ಲ. It is for the State you have to take up the cause. ಇದು ಒಂದು ಕಡೆಯಾದರೆ, ಎರಡನೆಯದು, ಈ ಬಗ್ಗೆ ಕೂಡಲೇ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು, ಇದಕ್ಕೆ ಬೇಕಾದಷ್ಟು ಹಣ ಇದೆ, ಆದರೆ ಅದನ್ನು ಬಿಡುಗಡೆ ಮಾಡಿಲ್ಲ; ಅದನ್ನು ಬಿಡುಗಡೆ ಮಾಡಲಿಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ಇದನ್ನು ಮಾಡಲಿಲ್ಲವೆಂದರೆ ಕರಾವಳಿ ಜನರು ನಿಮ್ಮನ್ನು ಯಾವಾಗಲೂ ಬಿಡುವುದಿಲ್ಲ, ಶಾಪ ಹಾಕುತ್ತಾರೆ. ಬಹಳ ವರ್ಷದ ಕನಸು ಇವತ್ತು ನನಸಾಗಿದೆ. ಮಾನ್ಯ ಜಾಫರ್ ಶರೀಫ್ ಅವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ, ನಾನು ಅದನ್ನು ಮೆಚ್ಚಿದ್ದೇವೆ. ಹಾಗಾದರೆ ತಮ್ಮ ಫೈಟ್ಸ್ ಏನು? ಇವತ್ತು ಜನಗಳ ನೇಲೆ ಆದರಿಂದ ಏನು ಪರಿಣಾಮವಾಗಿದೆ ಆ ಪರಿಣಾಮ ನಮ್ಮ ರಾಜ್ಯದ ಬೊಕ್ಕಸದ ಮೇಲೆ ಆಗಬಹುದು. ಏಕೆಂದರೆ ನಾನು ಆಗಲೇ ಹೇಳಿದೆ, ಎಸ್ಕಲೇಷನ್ ಕಾಸ್ಟ್ ಜಾಸ್ತಿಯಾಗುತ್ತದೆ ಎಂದು. ಆ ದೃಷ್ಟಿಯಿಂದ ಸರ್ಕಾರ ಎಲ್ಲಾ ರೀತಿಯಲ್ಲಿ ಪ್ರಯತ್ನ ಮಾಡಿ ತಕ್ಷಣ ಕೆಲಸ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದ ಮೇಲೆ ಒತ್ತಾಯ ತರುತ್ತೇನೆ.

ಶ್ರೀ ವಾಟಾಳ್ ನಾಗರಾಜ್. ಮಾನ್ಯ ಅಧ್ಯಕ್ಷರೆ, ಕೊಂಕಣ ರೈಲ್ವೆ ಆಗಬೇಕೆಂದು ಈ ರಾಜ್ಯದಲ್ಲಿ ನಿರಂತರವಾಗಿ ಹೋರಾಟಗಳು, ಒತ್ತಾಯಗಳು ನಡೆದವು. ಸದುದ್ದೇಶ ಇಟ್ಟುಕೊಂಡು ಆಗಿನ ರೈಲ್ವೆ ಮಂತ್ರಿಗಳಾಗಿದ್ದ ಜಾರ್ಜ್ ಫರ್ನಾಂಡೀಸ್ ಅವರು ಈ ಬಗ್ಗೆ ಬಹಳ ಆಸ್ಥೆ ವಹಿಸಿ ಕೊಂಕಣ ರೈಲ್ವೆ ಆಗಬೇಕೆಂದು ತೀವ್ರವಾಗಿ ಪ್ರಯತ್ನ ಮಾಡಿದರು. ಜೊತೆಗೆ ನಮ್ಮಲ್ಲಿ ಬೆಂಗಳೂರು-ಮೈಸೂರು ಬ್ರಾಡ್‌ಗೇಜ್ ರೈಲ್ವೆ ಆಗಬೇಕಾದರೂ ದಂಡವತೆಯವರು ಬಹಳ ಶ್ರಮವಹಿಸಿದರು. ಆಗ ಹಿಂದಿನ ಮುಖ್ಯ ಮಂತ್ರಿಗಳಾಗಿದ್ದ ದೇವರಾಜ ಅರಸು ಅವರು: ಆ ಯೋಜನೆಯನ್ನು ಉದ್ಘಾಟನೆ ಮಾಡಿದರು. ಮೊನ್ನೆ ಉಡುಪಿಗೆ ಪ್ರಧಾನಿ ಶ್ರೀ ನರಸಿಂಹರಾಯರು ಬಂದಾಗ ಈ ಯೋಜನೆಯನ್ನು ಉದ್ಘಾಟನೆ ಮಾಡಿ ಇದನ್ನು ಬೇಗ ಮುಗಿಸುತ್ತೇವೆಂಬ ಭರವಸೆಯನ್ನು ಸಹ ನಮ್ಮ ಕರ್ನಾಟಕದ ನೆಲದ ಮೇಲೆ ನಿಂತು ಮಾತನಾಡುತ್ತಾ ಕೊಟ್ಟಿದ್ದಾರೆ. ಗೋವಾದಲ್ಲಿರತಕ್ಕ ಫೆಲೆರೋ ಎನ್ನತಕ್ಕವರು ಕೇಂದ್ರದಲ್ಲಿ ಮಂತ್ರಿಯಾಗಿದ್ದಾರೆ. ಫೆಲೆರೋ ಅವರ

ಒತ್ತಡದಿಂದ ಇದು ನಿಲ್ಲತಕ್ಕ ಒಂದು, ಸಂದಿಗ್ಧ ಪರಿಸ್ಥಿತಿ ಬಂದಿದೆ. ಇದಕೆ ಒಂದು ದೊಡ್ಡ ಪಿತೂರಿ ನಡೆಯುತ್ತಿದೆ. ಗೋವಾದಲ್ಲಿ ಅನೇಕ ರಾಜಕೀಯ ಒತ್ತಡವಿದೆ. ಕೆಲವು ಶ್ರೀಮಂತರ ಒತ್ತಡವಿದೆ. ಕೆಲವು ಸಾರಿಗೆ ಮಾಲೀಕರ ಒತ್ತಡವಿದೆ. ದೊಡ್ಡ ದೊಡ್ಡ ಜಮೀನ್ದಾರರ ಒತ್ತಡವಿದೆ. ಅವರೆಲ್ಲರ ಒತ್ತಡಕ್ಕೆ ಮಣಿದು, ಒಂದು ಕಡೆ ಉಡುಪಿಯಲ್ಲಿ 1994ರೊಳಗೆ ಈ ಯೋಜನೆಯನ್ನು ಮುಗಿಸುತ್ತೇನೆಂದು ಪ್ರಧಾನಮಂತ್ರಿಗಳು ಹೇಳುತ್ತಾರೆ. ದೆಹಲಿಗೆ ಹೋಗಿ ಈ ಯೋಜನೆಯನ್ನು ನಾವು ಸ್ಥಗಿತಗೊಳಿಸುತ್ತೇವೆಂದು ಅವರಿಗೆ ಭರವಸೆ ಕೊಡುತ್ತಿದ್ದಾರೆ. ಆ ಪರಿಸ್ಥಿತಿಯನ್ನು ನೋಡಿದಾಗ ಕರ್ನಾಟಕದ ಒಂದು ಒತ್ತಡ ಕೇಂದ್ರದ ಮೇಲೆ ಪ್ರಭಾವ ಬೀರತಕ್ಕ ಶಕ್ತಿ ಕರ್ನಾಟಕಕ್ಕೆ ಇಲ್ಲವೇನೋ ಎನ್ನುವ ನೋವು ನಮಗೆ ಆಗುತ್ತಿದೆ. ರೈಲ್ವೆಯಲ್ಲಿ ನಮಗೆ ಆಗಿರತಕ್ಕ ಅನ್ಯಾಯ ಇಡೀ ದೇಶದ ಭೂಪಟದಲ್ಲಿ ಆದನ್ನು ತಾವು ತೆಗೆದು ನೋಡಿದಾಗ ಕರ್ನಾಟಕವನ್ನು ತೀವ್ರವಾಗಿ ಕಡೆಗಣಿಸಿದ್ದಾರೆ. ಕೇಂದ್ರಕ್ಕೆ ದಕ್ಷಿಣ ರೈಲ್ವೆ ಅಂದರೆ ಕೇರಳ, ಆಂಧ್ರ ಮತ್ತು ತಮಿಳುನಾಡು ನಮ್ಮ ಕರ್ನಾಟಕವನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ. ನಾನು ಸಂತೋಷ ಪಡುತ್ತೇನೆ, ದಾಸಪ್ಪನವರು ರೈಲ್ವೆ ಮಂತ್ರಿಯಾಗಿದ್ದರು, ಹನುಮಂತಯ್ಯನವರು ರೈಲ್ವೆ ಮಂತ್ರಿಯಾಗಿದ್ದರು, ಟಿ.ಎ.ಪೈ ರವರು ರೈಲ್ವೆ ಮಂತ್ರಿಯಾಗಿದ್ದರು, ಪೂಣಚ್ಚರವರು ರೈಲ್ವೆ ಮಂತ್ರಿಯಾಗಿದ್ದರು. ಆದರೆ ಮಾನ್ಯ ಪರೀಫ್ರವರು ಬಂದಮೇಲೆ ಕೆಲಸ ಆಗಿದೆ. ನಾನು ಮೆಚ್ಚುತ್ತೇನೆ ಮತ್ತು ಅವರ ನಿರ್ಣಯಗಳನ್ನು ಸ್ವಾಗತಿಸುತ್ತೇನೆ. ಹನುಮಂತಯ್ಯನವರನ್ನು ನಾವು ಇವತ್ತು ನೆನಸಿಕೊಳ್ಳಬೇಕು. ರಾಷ್ಟ್ರನಾಯಕರಾದ ಜಯಪ್ರಕಾಶ್ ನಾರಾಯಣ್‌ರವರು ಹನುಮಂತಯ್ಯನವರನ್ನು ಹೊಗಳಿದರು. ಕಾರಣ ಏನೆಂದರೆ ರೈಲುಗಳು ಕಾಲಕ್ಕೆ ತಕ್ಕಂತೆ ಓಡಾಡುತ್ತಿವೆ ಎನ್ನುವ ಮಾತನ್ನು ಅವರು ಒಂದು ಕಡೆ ಹೇಳುತ್ತಾರೆ. ಹಾಗೆಂದು ಹೇಳಿ ಹನುಮಂತಯ್ಯನವರನ್ನು ಪ್ರಶಂಸೆ ಮಾಡುತ್ತಾರೆ. ಹನುಮಂತಯ್ಯನವರು ಸಹ ನಮಗೆ ಬಹಳ ಬುನಾದಿ ಹಾಕಿದ್ದಾರೆ. ಅನೇಕ ಯೋಜನೆಗಳು ಅವರ ಕಾಲದಲ್ಲಿ ಆಗಿವೆ. ನಮ್ಮ ಕೇಂದ್ರದ ಮೇಲೆ ಕರ್ನಾಟಕದ ಪ್ರಭಾವ ಬೀರತಕ್ಕ ಶಕ್ತಿ ತಾವು ಕಳೆದುಕೊಂಡಿದ್ದೀರಿ ಎಂದು ನಾನು ಹೇಳುತ್ತಿದ್ದೇನೆ. ನನಗನಿಸುತ್ತದೆ ಮಾನ್ಯ ವಿರೋಧಪಕ್ಷದ ನಾಯಕರಾದ ದೇಶಪಾಂಡೆಯವರು ಹೇಳಿದರು, ನರಸಿಂಹರಾಯರನ್ನು ಒಲ್ಲಿಸತಕ್ಕ ಕೆಲಸವನ್ನು ನೀವು ಮಾಡಬೇಕು. ನೀವು ಅವರನ್ನು ಹೊಗಳಿ ನಮ್ಮದೇನೂ ಅಭ್ಯಂತರವಿಲ್ಲ, ನೀವೆಲ್ಲ ಸಂಪೂರ್ಣವಾಗಿ ಕರ್ನಾಟಕದ ಎಲ್ಲಾ ಕಾಂಗ್ರೆಸ್ಸಿಗರು ನರಸಿಂಹರಾಯರ ಜೊತೆಯಲ್ಲಿ ನಿಲ್ಲಿ. ನಮ್ಮದೇನೂ ತಕರಾರು ಇಲ್ಲ. ಆದರೆ ನಮ್ಮ ರಾಜ್ಯಕ್ಕೆ ಆಗಬೇಕಾದ ಅನುಕೂಲಗಳು ಆ ಬಗ್ಗೆ ನಮ್ಮ ಧ್ವನಿ ಅವರ ಜೊತೆಗೆ ಏರಬೇಕು. ಎತ್ತರದಲ್ಲಿ ನೀವು ಕೂಗಬೇಕು. ನಿಮ್ಮ ರಾಜಕಾರಣದ ಪ್ರಭಾವವನ್ನು ಕೇಂದ್ರದಲ್ಲಿ ಎಷ್ಟರಮಟ್ಟಿಗೆ ಬೀರಬೇಕು ಅಷ್ಟರಮಟ್ಟಿಗೆ ಬೀರುತ್ತಿಲ್ಲ. ಅದಕ್ಕೆ ಒಂದು ಶ್ವೇತಪತ್ರವನ್ನು ಹೊರಡಿಸಿ. ನಮ್ಮ ಕರ್ನಾಟಕ ರಾಜ್ಯದಲ್ಲಿ ಎಷ್ಟು ಹೊಸ ರೈಲ್ವೆ ಲೈನುಗಳನ್ನು ಕೊಟ್ಟಿದ್ದಾರೆ. ಎಷ್ಟು ರಾಷ್ಟ್ರೀಯ ಹೆದ್ದಾರಿಗಳು ನಮಗೆ ಆಗಿದೆ. ತಮಿಳುನಾಡಿನಲ್ಲಿ ಎಷ್ಟು ರಾಷ್ಟ್ರೀಯ ಹೆದ್ದಾರಿಗಳು ಆಗಿವೆ, ಕೇರಳದಲ್ಲಿ ಎಷ್ಟು ಆಗಿವೆ. ನಮ್ಮಲ್ಲಿ ಎಷ್ಟು ಆಗಿವೆ, ಆಂಧ್ರಪ್ರದೇಶದಲ್ಲಿ ಎಷ್ಟು ಆಗಿವೆ ಅದನ್ನು ತೆಗೆದುಕೊಂಡು ನೋಡಿದಾಗ ತಮಗೆ ಗೊತ್ತಾಗುತ್ತದೆ. ನಾವು ಹತ್ತಾರು ವರ್ಷಗಳಿಂದ ಒಂದೇ ಸಮನೆ ಕೂಗುತ್ತಲೇ ಇದ್ದೇವೆ. ಸಂಪೂರ್ಣವಾಗಿ ನಮ್ಮ ಕೂಗು ಕೇಂದ್ರಕ್ಕೆ ಮುಟ್ಟಿಲ್ಲ. ಇದೊಂದು ದೊಡ್ಡ ಬರೆ. ಕೊಂಕಣ ರೈಲ್ವೆ ದೊಡ್ಡ ಬರೆ. ದೊಡ್ಡ ಬರೆಯನ್ನು ನಮ್ಮ ಮೇಲೆ ಹಾಕಿದಂತಹ, ಕನ್ನಡಿಗರ ಮೇಲೆ ಹಾಕುವಂತಹ ಒಂದು ದೊಡ್ಡ ಬರೆ. ಕೊಂಕಣ ರೈಲ್ವೆ ನಮ್ಮಿಂದ ಪ್ರಾರಂಭವಾಗಿ ಕರಾವಳಿಯಿಂದ ಪ್ರಾರಂಭವಾಗಿ ಕೊನೆಗೆ ಅದು ಮಹಾರಾಷ್ಟ್ರಕ್ಕೆ ಮುಟ್ಟುತ್ತದೆ. ಇದು ಕೇವಲ ಕರ್ನಾಟಕ ಉದ್ದಗಲಕ್ಕೆ ಬರತಕ್ಕದ್ದು ಅಲ್ಲ. ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಎಲ್ಲಾ ಜನರಿಗೆ ಸೇರುವಂತಹ ಸ್ವತ್ತು. ಯಾವುದೋ ಒಂದು ಉದ್ದೇಶದಿಂದ ರಾಜಕೀಯದಿಂದ ಮಾಡುತ್ತಿಲ್ಲ. ಇದನ್ನು ನಿಲ್ಲಿಸತಕ್ಕ ಕುತಂತ್ರ ಇವತ್ತು ಗೋವಾದವರು ಪ್ರಭಾವ ಭೀರುವುದಾದರೆ ನೀವು ಪ್ರಭಾವ ಭೀರುವುದರಲ್ಲಿ ವಿಫಲರಾಗಿದ್ದೀರಿ. ನಾನು ತಮಗೆ ಹೇಳುತ್ತಿದ್ದೇನೆ. ಇದನ್ನು ಏನಾದರೂ ನಿಲ್ಲಿಸತಕ್ಕ ಪರಿಸ್ಥಿಗೆ ಹೋಗುವುದಾದರೆ ದೊಡ್ಡ ಆಂಧೋಳನ, ದೊಡ್ಡ ಹೋರಾಟ, ದೊಡ್ಡ ಚಳುವಳಿ ಕರ್ನಾಟಕದ ಆದ್ಯಂತ ನಡೆಯುತ್ತದೆ. ಆದನ್ನು ತಪ್ಪಿಸುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ

ಎನ್ನುವ ಮಾತನ್ನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುತ್ತಿದ್ದೇನೆ. ನೀವು ರಾಜ್ಯದ ಬಗ್ಗೆ ಕಾಳಜಿ ಇಟ್ಟುಕೊಂಡಿದ್ದೀರಿ. ಉಪ-ಮುಖ್ಯಮಂತ್ರಿಗಳಲ್ಲಿ ನಾನು ಬಹಳ ಕಳಕಳಿಯಿಂದ ಹೇಳತಕ್ಕದ್ದು ಕೇಂದ್ರದಲ್ಲಿ ತಾವು ಸಚಿವರಾಗಿದ್ದಾಗ ನಮ್ಮ ರಾಜ್ಯದ ಪರಿಸ್ಥಿತಿಯನ್ನು ಮಹಾಜನ್ ರೀಪೋರ್ಟ್ ಬಗ್ಗೆ ಚರ್ಚೆಗೆ ಬಂದಾಗ ತಾವು ಪಾರ್ಲಿಮೆಂಟ್‌ನಲ್ಲಿ ಮಾಡಿದಂತಹ ಭಾಷಣ ನೀವು ಮತ್ತು ವೀರೇಂದ್ರ ಪಾಟೀಲ್‌ರು ಮಾಡಿದಂತಹ ಭಾಷಣ ನಿಜವಾಗಲೂ ಚರಿತ್ರಾರ್ಹವಾದ ಭಾಷಣವನ್ನು ಮಾಡಿದ್ದೀರಿ. ನಾವು ಗ್ಯಾಲರಿಯಲ್ಲಿ ಕುಳಿತು ಜಿ.ವಿ.ಹಳ್ಳಿಕೇರಿಯವರು, ಶಿವಪ್ಪನವರು ನಾನು ನಿಮ್ಮ ಭಾಷಣವನ್ನು ಕೇಳಿದ್ದೇವೆ. ಒಂದೊಂದು ಪದವು ಸಹ ತೂಕವಾಗಿ ಹೆಚ್ಚಿನ ರೀತಿಯಲ್ಲಿ ಶಕ್ತಿಯುತವಾಗಿ ತಾವು ಮಾತನಾಡಿದ್ದೀರಿ. ಇವತ್ತು ತಮಗೆ ಕೇಂದ್ರದಲ್ಲಿ ತುಂಬಾ ಸ್ನೇಹಿತರು ಇದ್ದಾರೆ. ಅಲ್ಲಿನ ರಾಜಕಾರಣ ತಮಗೆ ಚೆನ್ನಾಗಿದೆ. ಅದರ ಬಗ್ಗೆ ನನಗೆ ತಕರಾರು ಇಲ್ಲ. ನಿಮ್ಮ ಎಲ್ಲಾ ಒತ್ತಡವನ್ನು ಉಪಯೋಗಿಸಿ ಕರ್ನಾಟಕಕ್ಕೆ ಆಗಿರತಕ್ಕ ಅನ್ಯಾಯವನ್ನು ತಪ್ಪಿಸುವುದಕ್ಕೆ ತಾವು ಪ್ರಮುಖವಾಗಿ ನಿಲ್ಲಬೇಕು. ಮತ್ತು ಈ ಸಭೆಯ ಮೂಲಕ ಸರ್ವಸಮ್ಮತವಾದ ಒಂದು ನಿರ್ಣಯವನ್ನು ತಾವು ಕೈಗೊಳ್ಳಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ನಮ್ಮ ರೈಲುಗಳು ಏನೇನು ಆಗಬೇಕೆಂದು ತಾವು ತಿಳಿದುಕೊಳ್ಳಬೇಕು. ಕೊಂಕಣ ಒಂದೇ ಅಲ್ಲ, ಅನೇಕ ರೈಲ್ವೆ ಬೇಡಿಕೆಗಳು ಇವತ್ತು ಆಗಬೇಕಾಗಿದೆ. ಚಾಮರಾಜನಗರ-ಮೆಟ್ಟುರುಪಾಳ್ಯ ಆಗಬೇಕು. ಕೆಜಿಫ್‌ನಿಂದ ಯಲಹಂಕದವರೆಗೆ, ಆ ಚಿಕ್ಕ ರೈಲಿನ ಬಗ್ಗೆ ದೊಡ್ಡ ಹೋರಾಟವೇ ನಡೆಯಿತು. ಅದು ಹಳ್ಳಿಯ ರೈಲು ಅಂತಹೇಳಿ ಪ್ರತಿಯೊಂದು ಹಳ್ಳಿಹಳ್ಳಿಯಲ್ಲಿ ನಿಂತು ಮುಂದೆ ಹೋಗುತ್ತದೆ. ಚಿಕ್ಕ ರೈಲು ಅಂತ ಅದಕ್ಕೆ ಹೆಸರು. ಇದರ ಬಗ್ಗೆ ಹೋರಾಟ ಮಾಡಿದರು. ರೈಲುಗಳನ್ನು ಕಿತ್ತು ಹಾಕಿದ್ದರು. ನಂತರ ಹೋರಾಟ ಮಾಡಿ ಅದನ್ನು ಉಳಿಸಿದ್ದಾಯಿತು. ಮಾನ್ಯ ಟಿ.ಎ. ಪೈ ಅವರು ಇದ್ದಾಗ ಅದನ್ನು ಉಳಿಸಿಕೊಟ್ಟರು. ಇದನ್ನು ಬ್ರಾಡ್‌ಗೇಜ್ ಮಾಡುವುದಕ್ಕೆ ತಾವು ಕಾರ್ಯಕ್ರಮ ಕೈಗೊಳ್ಳಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ. ಇಂತಹ ಅನೇಕ ಬೇಡಿಕೆಗಳು ಇವೆ. ಬೆಂಗಳೂರು ಉತ್ತರದ ರೈಲು ಬಗ್ಗೆ ಏನಾಯಿತು? ಪೇಪರ್‌ನಲ್ಲಿ ಹೇಳುತ್ತಿದ್ದೀರಿ. ಇದರ ಬಗ್ಗೆ ಯಾವ ವಿಚಾರವೂ ಇಲ್ಲ. ಆದ್ದರಿಂದ ನಾನು ಮಾನ್ಯ ಉಪಮುಖ್ಯಮಂತ್ರಿಗಳನ್ನು ಕಳಕಳಿಯಿಂದ ಕೇಳುತ್ತಿದ್ದೇನೆ. ಈ ರಾಜ್ಯದ ಬಗ್ಗೆ ತಮಗೂ ಕಳಕಳಿ ಇದೆ. ಈ ಬಗ್ಗೆ ತಮ್ಮ ನಿಲುವು ಏನು ಎಂದು ಸ್ಪಷ್ಟಪಡಿಸಬೇಕು. ನರಸಿಂಹರಾಯರು ಇರಲಿ, ಅರ್ಜುನ್‌ಸಿಂಗ್ ಇರಲಿ, ನಮಗೆ ಅವರ ಬಗ್ಗೆ ತಕರಾರು ಇಲ್ಲ. ಆದರೆ ನೀವು ಮಾಡತಕ್ಕಂಥ ವಿಚಾರದಲ್ಲಿ ಕರ್ನಾಟಕದ ಪರವಾಗಿ ನಿಲ್ಲಬೇಕು. ಆದ್ದರಿಂದ ಈ ಬಗ್ಗೆ ಒಂದು ನಿರ್ಣಯ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿ) :- ಮಾನ್ಯ ಅಧ್ಯಕ್ಷರೇ, ಅತ್ಯಂತ ಮಹತ್ವದ ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಸದನದಲ್ಲಿ ಪ್ರಸ್ತಾವನೆ ಮಾಡಿದ್ದಾರೆ. ಕೊಂಕಣ ರೈಲ್ವೆ ಯೋಜನೆ ನಮ್ಮ ರಾಜ್ಯದ ಹಿತದೃಷ್ಟಿಯಿಂದ, ಮತ್ತು ಈ ದೇಶದ ಹಿತದೃಷ್ಟಿಯಿಂದ, ಅತ್ಯಂತ ಪ್ರಾಮುಖ್ಯವಾದಂಥ ಒಂದು ಯೋಜನೆ. ಅವರು ಹೇಳಿದಂತೆ ಈ ಯೋಜನೆಗೆ ಒಂದು ವಿಶೇಷವಾದಂಥ ಅರ್ಥ ಇದೆ. ಹಿಂದೇ ಯಾವಾಗಲೂ ಕೂಡ ಒಂದು ಕಾರ್ಪೊರೇಷನ್ ಮೂಲಕ ಒಂದು ದೊಡ್ಡ ರೈಲ್ವೆ ಯೋಜನೆಯನ್ನು ಸ್ಥಾಪನೆ ಮಾಡುವ ಕಾರ್ಯವನ್ನು ಕೇಂದ್ರ ಸರ್ಕಾರ ಕೊಟ್ಟಿದೆ ಮತ್ತು ಮಹಾರಾಷ್ಟ್ರ, ಗೋವಾ ಸರ್ಕಾರಗಳೂ ಕೊಟ್ಟಿವೆ ಎನ್ನತಕ್ಕಂಥಾದ್ದನ್ನು ತಾವೇ ತಮ್ಮ ಪ್ರಸ್ತಾವನೆಯಲ್ಲಿ ನಿರೂಪಣೆ ಮಾಡಿದ್ದೀರಿ. ಈಗ ನಾನು ಹೇಳತಕ್ಕದ್ದು ಏನೂ ಇಲ್ಲ. ಕರ್ನಾಟಕ ರಾಜ್ಯಸರ್ಕಾರ ಈ ಕೊಂಕಣ ರೈಲು ಯೋಜನೆಗೆ ಸಂಪೂರ್ಣ ಬೆಂಬಲವನ್ನು ಕೊಟ್ಟಿದೆ. ಮತ್ತು ಯಾವ ವಿಧದಲ್ಲೂ ಕೂಡ ಈ ಕೊಂಕಣ ರೈಲ್ವೆ ಯೋಜನೆ ಸ್ಥಗಿತಗೊಳ್ಳತಕ್ಕಂಥಾದ್ದನ್ನು ಕರ್ನಾಟಕ ರಾಜ್ಯ ಒಪ್ಪುವುದಕ್ಕೆ ಸಾಧ್ಯವಾಗುವುದಿಲ್ಲ. ಕನ್ನಡದ ನೆಲದಮೇಲೆ ಏನು ಪ್ರಧಾನಮಂತ್ರಿಗಳು ಭರವಸೆಯನ್ನು ಈ ನಾಡಿನ ಜನತೆಗೆ ಕೊಟ್ಟಿದ್ದಾರೆ, ದೇಶಕ್ಕೆ ಕೊಟ್ಟಿದ್ದಾರೆ ಅದೇ ಅಧಿಕೃತವಾದಂಥ ವಾರ್ತೆ; ಕರ್ನಾಟಕ ರಾಜ್ಯಸರ್ಕಾರದ ಮಟ್ಟಿಗೆ ಈ ನೆಲದ ಮೇಲೆ ನಿಂತು ಉಡುಪಿ ರೈಲ್ವೆ ಸ್ಟೇಷನ್ ಉದ್ಘಾಟನೆ ಮಾಡಿದಂಥ ಸಂದರ್ಭದಲ್ಲಿ ಮಾನ್ಯ ಪ್ರಧಾನಮಂತ್ರಿಗಳು ತೋರಿದ ಕಳಕಳಿ ಏನಿದೆ ಮತ್ತು ಅವರು ಆಡಿದ

ಮಾತುಗಳು ಏನಿವೆ, ಅದರ ಬಗ್ಗೆ ರಾಜ್ಯಸರ್ಕಾರ ಸಂಪೂರ್ಣ ವಿಶ್ವಾಸ ಇಟ್ಟಿದೆ, ಸಂಪೂರ್ಣ ಭರವಸೆಯನ್ನು ಇಟ್ಟಿದೆ. ಮತ್ತು ಏನು ಭರವಸೆಯನ್ನು ಅವರು ಕೊಟ್ಟಿದ್ದಾರೆ, ಅದನ್ನು ಅವರು ಕಾರ್ಯಗತ ಮಾಡುತ್ತಾರೆ ಎನ್ನತಕ್ಕಂಥ ಸಂಪೂರ್ಣವಾದ ವಿಶ್ವಾಸ ನನಗೆ ಇದೆ. ಪ್ರಶ್ನೆ ಎಂದರೆ ಇವತ್ತು ಗೋವಾದಲ್ಲಿ ಕೆಲವು ಅಭಿಪ್ರಾಯಗಳಲ್ಲಿ ವ್ಯತ್ಯಾಸ ಬಂದಿದೆ, ಅದು ಯಾವುದೋ ಅಲ್ಯಾನ್‌ಮೆಂಟ್ ಬಗ್ಗೆ, ಹಾಗೆಂದು ಹೇಳಿ. ಅದು ವಿಶೇಷವಾದ ಪರಿಸ್ಥಿತಿ ಏನೂ ಅಲ್ಲ. ನಾವು ಬೇಡ್ತಿ ಮಾಡಬೇಕು ಎಂದು ಹೇಳಿದಾಗ ಸ್ವಾಮಿಜಿ ಒಬ್ಬರು ಬಂದರು, ಇದು ಆಗುವುದಿಲ್ಲ ಎಂದು ಹೇಳಿದರು. ಮತ್ತೊಂದು ಕಡೆ ಯಾವುದೋ ಒಂದು ನಾಲೆಯನ್ನು ತೆಗೆದುಕೊಳ್ಳುವಾಗ ಈ ಅಲ್ಯಾನ್‌ಮೆಂಟ್ ಇಲ್ಲಿ ಸರಿ ಇಲ್ಲ, ಸ್ವಲ್ಪ ಮೇಲಕ್ಕೆ ತೆಗೆದುಕೊಂಡುಹೋಗಿ, ನಮ್ಮ ಹಳ್ಳಿಗೆ ಅನುಕೂಲವಾಗುತ್ತದೆ ಹೇಳಿ ಅಭಿಪ್ರಾಯ ಬಂತು. ಇಂತಹ ಯೋಜನೆಗಳು ಬಂದಾಗ ಇಂತಹ ಒತ್ತಾಯ ಬರತಕ್ಕಂಥಾದ್ದು ಸರ್ವ ಸಾಮಾನ್ಯ. ಅದಕ್ಕೆ ನಾವು ಪ್ರಾಧಾನ್ಯತೆ ಕೊಟ್ಟು ಏನು ಪ್ರಧಾನಮಂತ್ರಿಗಳು ಭರವಸೆ ಕೊಟ್ಟಿದ್ದಾರೆ, ಅದಕ್ಕೆ ನಾವು ಅಳಿಸಿಬಿಟ್ಟು, ಈಗ ಗೋವಾದಲ್ಲಿ ಯಾರದ್ದೋ ಹೆಸರನ್ನು ಕೂಡ ಅವರು ಹೇಳಿದರು. ಅಲ್ಲಿ ಮುಖ್ಯಮಂತ್ರಿಗಳಿಗೂ, ಕೇಂದ್ರದ ಮಂತ್ರಿಗಳಿಗೂ ಅಭಿಪ್ರಾಯ ವ್ಯತ್ಯಾಸವಿದೆಯೆಂದು ಹೇಳಿದರು. ಅಲ್ಲಿ ಬಂದಿರತಕ್ಕಂಥಾದ್ದು ಚರ್ಚ್‌ನವರೂ ಈ ವಿಚಾರವನ್ನು ಕೈಗೆತ್ತಿಕೊಂಡಿದ್ದಾರೆ ಎಂದು. ಈ ದೇಶದಲ್ಲಿ ಬಂದಿರತಕ್ಕಂಥಾದ್ದು, ಒಂದು ಕಡೆ ಸಾಧುಗಳಿಂದ ಹೊಡೆತ ಇನ್ನೊಂದು ಕಡೆ ಚರ್ಚ್‌ಗಳಿಂದ ಹೊಡೆತ. ನಮ್ಮ ದೇಶದ ಅಭಿವೃದ್ಧಿ ಕಾರ್ಯಗಳು ಕೊಂಚಮಟ್ಟಿಗೆ ಸ್ಥಗಿತವಾಗತಕ್ಕಂಥಾದ್ದು, ಅವುಗಳಿಂದಾಗಿ ನಿಧಾನವಾಗತಕ್ಕಂಥ ಪ್ರವೃತ್ತಿ ಬರುತ್ತಿದೆ.

ಆದುದರಿಂದ, ಈ ರೈಲ್ವೆ ಯೋಜನೆ ವಿಚಾರವಾಗಿ, ನನ್ನ ಸ್ನೇಹಿತರಾದ ರಾಣೆಯವರು, ಕೆಲಸಕಾರ್ಯಗಳು ನಡೆಯುತ್ತಿವೆ ಎಂದು ಹೇಳುತ್ತಿದ್ದಾರೆ. ಪ್ರಾಮುಖ್ಯವಾಗಿ ಗೋವಾ ರಾಜ್ಯದಲ್ಲಿ ಕೊಂಚಮಟ್ಟಿಗೆ ಇದರ ಬಗ್ಗೆ ಒಡಕು ಧ್ವನಿ ಪ್ರಾರಂಭವಾಗಿದೆ. ಆದರೆ, ಪ್ರಧಾನ ಮಂತ್ರಿಗಳಿಗೆ ಈ ಶಕ್ತಿ ಇದೆ ಮತ್ತು ನಮ್ಮ ರೈಲ್ವೆ ಮಂತ್ರಿಗಳಾದ ಜಾಫರ್ ಷರೀಫ್‌ರವರನ್ನು ಮುಕ್ತ ಕಂಠದಿಂದ ಹೊಗಳಿದ್ದೀರಿ. ಅದರಲ್ಲಿಯೂ ಅವರು ಮಾಡಿರತಕ್ಕ ಒಳ್ಳೆಯ ಕೆಲಸಗಳು, ಈ ರಾಜ್ಯದ ಮಟ್ಟಿಗೆ ಅವರಿಗಿರತಕ್ಕ ಕಳಕಳಿಯನ್ನು ಕಾರ್ಯರೂಪಕ್ಕೆ ತಂದು ತೋರಿಸತಕ್ಕ ಒಬ್ಬ ರೈಲ್ವೆ ಮಂತ್ರಿ ಎಂದು ತಾವೆಲ್ಲರೂ ಒಪ್ಪಿದ್ದೀರಿ ಮತ್ತು ಅವರನ್ನು ಶ್ಲಾಘನೆ ಮಾಡಿದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ತಾವು ಸುಂದರವಾಗಿ ಮಾತನಾಡುತ್ತಿರುವುದನ್ನು ಹಾಗೂ ನಿಮ್ಮ ಎಲ್ಲಾ ಉತ್ತರವನ್ನೂ ಒಪ್ಪಿದ್ದೇವೆ. ಆದರೆ ಈ ಯೋಜನೆಯನ್ನು ಸ್ಥಗಿತ ಮಾಡಿರುವುದು ನಿಜ, ಆ ಸೂಚನೆ ಬಂದಿರತಕ್ಕಂಥಾದ್ದು ನಿಜ. ಇದರ ಬಗ್ಗೆ ರಾಜ್ಯಸರ್ಕಾರದವರು ಏನು ಮಾಡಿದ್ದಾರೆ ಎನ್ನುವುದನ್ನು ನಾವು ಕೇಳುತ್ತಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ:- ಪ್ರಧಾನ ಮಂತ್ರಿಗಳು ಸ್ಥಗಿತ ಮಾಡಿದ್ದಾರೆ. It is a fact. He has suspended the work because agitation was going on there, hunger strike was going on.. ತಮ್ಮ ಗಮನಕ್ಕೆ ಒಂದು ಮಾತು ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. We are all nterested- we come from that district.. Your Prime Minister he was also commit-ed to that project but suddently I don't know what has happened. He has given a direction I know it.. ಅಜಿಟೇಷನ್ ಇವತ್ತಿನದಲ್ಲ.

with the help of the Church it is since last $2^{1/2}$ years but the Central Government did not budge, nor our Government budge or your Government budge.. but I don't know what has happened to the Prime Minister, he gave order suspending the work.. ಹಾಗಾಗಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಪ್ರಧಾನಮಂತ್ರಿಗಳೂ ಬೆಂಬಲ ಮಾಡಿದ್ದಾರೆಂದು ಹೇಳಿದೆ. ಇವತ್ತು ತಾವು ಕೂಡಲೇ, becuase it is a Corporation we are

partners for the Corporation, escalation cost we will have to contribute, our Treasury money goes there...

ಶ್ರೀ ಬಿ.ಎಸ್. ಯಡಿಯೂರಪ್ಪ:- ಇನ್ನೂ ನಾಲ್ಕಾರು ದಿವಸ ಮುಂದೆ ಹೋಗುತ್ತದೆ. ಆದ್ದರಿಂದ, ಈ ಸದನದಿಂದ ಒಂದು ನಿರ್ಣಯ ಮಾಡಿ ಕಳುಹಿಸಿಕೊಡೋಣ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಪ್ರಧಾನ ಮಂತ್ರಿಗಳು ಭರವಸೆ ಕೊಟ್ಟು ಹೋದರು, ಆಮೇಲೆ ವೀಕ್ ಆದರು ಎಂದು ಹೇಳಿದಿರಿ. ಆ ರೀತಿ ಇಲ್ಲ. ಅವರು ಇನ್ನೂ ಈಗ ಸ್ಟ್ರಾಂಗ್ ಆಗಿದ್ದಾರೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- ನಮ್ಮದೇನೂ ತಕರಾರು ಇಲ್ಲ. 10 ಜನ ಹಂಗರ್ ಸ್ಟ್ರೈಕ್ ಮಾಡುವುದಕ್ಕೆ ಕುಳಿತಿದ್ದಾರೆ. Ruling Party and also the Opposition.

ಇವತ್ತು ಇದೇನೂ ಹೊಸ ಸಮಸ್ಯೆ ಅಲ್ಲ. ಎರಡು ವರ್ಷಗಳಿಂದ ಈ ಸಮಸ್ಯೆ ನಡೆಯುತ್ತಿದೆ.

ನಾನು ಮೊನ್ನೆ ಗೋವಾದಲ್ಲಿದ್ದೆ. ಗೋವಾದಲ್ಲಿ ರೂಲಿಂಗ್ ಪಾರ್ಟಿ ಜನ, ಕಾಂಗ್ರೆಸ್ ಪಾರ್ಟಿ ಜನ they have joined because they are fighting against the Centre to immediately withdraw the Stay orders...

ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. ಇದರಿಂದ ನಮ್ಮ ಬೊಕ್ಕಸದ ಮೇಲೆ ಪರಿಣಾಮವಾಗುತ್ತದೆ. ನಮ್ಮ ಜನಗಳಿಗೆ ಕಷ್ಟವಾಗುತ್ತದೆ, ನಮ್ಮ ಡೆವಲಪ್‌ಮೆಂಟ್ ನಿಂತುಹೋಗುತ್ತದೆ. ತಾವು ಕೇಂದ್ರಸರ್ಕಾರದ ಮೇಲೆ ಒತ್ತಡ ತಂದು, ಪ್ರಧಾನಿಯವರ ಮೇಲೆ ಒತ್ತಡ ತರಬೇಕು. ಮತ್ತು ಇಲ್ಲಿ ಒಂದು ನಿರ್ಣಯ ಮಾಡಿ ಕಳುಹಿಸಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ:- ವಿರೋಧಪಕ್ಷದ ನಾಯಕರಾದ ದೇಶಪಾಂಡೆಯವರು ಸ್ಟೇ ಮಾಡಿದ್ದಾರೆಂದು ನಮಗೆ ತಿಳಿಸುತ್ತಿದ್ದಾರೆ. ನಾವು ಕೇಂದ್ರಸರ್ಕಾರದ ಮಟ್ಟದಲ್ಲಿ ವ್ಯವಹಾರ ಮಾಡಿ, ಈ ಕೊಂಕಣ ರೈಲ್ವೆ ಯೋಜನೆ ಅನಿರ್ಬಂಧಿತವಾಗಿ ಮುಂದುವರಿಯಬೇಕೆಂಬ ಪ್ರಬಲವಾದ ಒತ್ತಾಯವನ್ನು ನಮ್ಮ ಸರ್ಕಾರದ ಪರವಾಗಿ ತರುತ್ತೇವೆ.

SHRI. P.G.R. SINDHIA: What is that this Government doing? What is its stand now? These changes have appeared in press for about 8 days back. What your Chief Secretary has done, what the Government has done?

ಶ್ರೀ ಎಸ್.ಎಂ. ಕೃಷ್ಣ:- ಸರ್ಕಾರದವರು ಆಗಿಂದಾಗ್ಗೆ ಒತ್ತಾಯ ತರುತ್ತಲೇ ಇರುತ್ತಾರೆ. ಮೊನ್ನೆ ಮಾನ್ಯ ಜಾರ್ಜ್ ಫರ್ನಾಂಡಿಸ್‌ರವರ ಭಾಷಣವನ್ನು ನಾನು ಪತ್ರಿಕೆಯಲ್ಲಿ ಓದಿದೆ. ಮೊಟ್ಟಮೊದಲನೆಯದಾಗಿ ಅವರು ಇದನ್ನು ಪ್ರಸ್ತಾವನೆ ಮಾಡಿದರು.

Shri. R.V. Deshapande: Chief Engineer who is incharge of Kokan Railway said we have suspended the work. We have received the directive from Government of India and we have withdrawn. Machineries worth lakhs were burnt. So they stopped.

SRI. S.M. KRISHNA: Perhaps when the machineries were burnt perhaps they got bit alarmed. Our Prime Minister has his own methods and style of functioning which is very very unique.

ಆದ್ದರಿಂದ Prime Minister's style of functioning... ಬದಲಾವಣೆ ಮಾಡಲು ಯಾರ ಕೈಯಿಂದಲೂ ಸಾಧ್ಯವಾಗುವುದಿಲ್ಲ. ಆದರೆ, ಜನಪರ ಕೆಲಸಕ್ಕೆ ಮಾತ್ರ ನಾವು ಪ್ರಬಲವಾದ ಒತ್ತಾಯವನ್ನು ಮಾನ್ಯ ಪ್ರಧಾನ ಮಂತ್ರಿಯವರ ಮೇಲೆ ಮತ್ತು ಕೇಂದ್ರ ಸರ್ಕಾರದ ಮೇಲೆ ಈ ಕೊಂಕಣ ರೈಲ್ವೆ ಯೋಜನೆ ಅನಿರ್ಬಂಧಿತವಾಗಿ ನಡೆಯಬೇಕು ಎನ್ನತಕ್ಕಂಥ ಒತ್ತಾಯವನ್ನು ತರುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಮಾಜಿ ಕೇಂದ್ರ ರೈಲ್ವೆ ಸಚಿವರು ಜವಾಬ್ದಾರಿಯಿಂದ ಹೇಳಿದ್ದಾರೆ. ಅವರ ಮಾತಿನ ಮೇಲೆ ತಮಗೆ ನಂಬಿಕೆ ಇದ ಎಂದು ನಾನು ಅಂದುಕೊಂಡಿದ್ದೇನೆ ತಮಗೆ ಏನು ಮಾಹಿತಿ ಇದೆ ಸರ್ಕಾರಕ್ಕೆ. ಇದುವರೆಗೂ ಅವರು ಏನು ಹೇಳಿದ್ದಾರೆ, ಅವರು ಹೇಳಿದ ನಂತರ ತಾವು ಏನಾದರೂ ಗೋವಾ ಜೊತೆಯಲ್ಲಿ ಮಾತುಕತೆ ಆಡಿದ್ದೀರಾ? ಕೇಂದ್ರದ ಜೊತೆ ಮಾತುಕತೆ ಮಾಡಿದ್ದೀರಾ? ನಿಮಗೆ ಇರತಕ್ಕಂಥ ಮಾಹಿತಿ ಏನು? ಜಾರ್ಜ್ ಫರ್ನಾಂಡಿಸ್ ಹೇಳಿದ ಮೇಲೆ ಅದು ಸತ್ಯ ಎಂದು ನಾವು ನಂಬಿದ್ದೇವೆ, ನೀವೂ ನಂಬಿದ್ದೀರಿ. ಅವರ ಶಾಸನಸಭೆಯಲ್ಲಿ ಇದರ ಬಗ್ಗೆ ಚರ್ಚೆ ನಡೆದಿದೆ. ನಾನು ಏನು ಕೇಳುತ್ತಿದ್ದೇನೆಂದರೆ ನಮ್ಮ ಸರ್ಕಾರದಲ್ಲಿ ಈ ಬಗ್ಗೆ ಮಾಹಿತಿ ಏನು ಇದೆ? ತಾವು ಏನು ಮಾಹಿತಿ ತರಿಸಿಕೊಂಡಿದ್ದೀರಿ ಇದರ ಬಗ್ಗೆ ತಾವು ಎಚ್ಚರಿಕೆ ಏನು ವಹಿಸಿದ್ದೀರಿ ದಯಮಾಡಿ ಹೇಳಿ.

ಶ್ರೀ ಆರ್.ವಿ. ದೇಶಪಾಂಡೆ:- ತಾವು ಪ್ರಧಾನ ಮಂತ್ರಿಗಳ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದೀರಿ. ನಿಮ್ಮ ಪ್ರಧಾನ ಮಂತ್ರಿಗಳ ಫಂಕ್ಷನಿಂಗ್ ಅದು ನಮಗೆ ಸಂಬಂಧಪಟ್ಟಿದ್ದುದು ಅಲ್ಲ. It has affected the interest of Karnataka State. It is contrary to the State Railway project.. ಹಾಗಾಗಿ ನಾನು ನಿಮಗೆ ಹೇಳುತ್ತಿದ್ದೇನೆ. What wrong is there to make a resolution ರೈಲ್ವೆ ಯೋಜನೆ ಟೈಮ್ ಷಡ್ಯೂಲ್ ಪ್ರಕಾರ ಆಗಬೇಕು ಎಂದು ತಮ್ಮದೂ ಅಭಿಪ್ರಾಯ ಇದೆ, ನಮ್ಮದು ಅಭಿಪ್ರಾಯ ಇದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಇದಕ್ಕೆ ಸ್ಪೇ ಕೊಟ್ಟು ಒಂದು ವಾರ ಕಳೆದು ಹೋಗಿದೆ. ಪತ್ರಿಕೆಗಳಲ್ಲಿ ಬಂದಿದೆ. ನಾವು ಈ ಸದನದ ಗಮನ ಸೆಳೆಯುತ್ತಿದ್ದೇವೆ. ಈಗಾಗಲೇ, ತಾವು ಈ ಬಗ್ಗೆ ಸಂಬಂಧಪಟ್ಟಂತೆ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದೇವೆ. ಸರ್ಕಾರ ಕ್ರಮ ತೆಗೆದುಕೊಂಡಿದೆ ಅಂದರೆ ನಾವು ಅದರ ಬಗ್ಗೆ ಏನೂ ಒತ್ತಡ ತರುವುದಕ್ಕೆ ಹೋಗುವುದಿಲ್ಲ. ಅದು ಇಲ್ಲ ಅಂದರೆ ತಮ್ಮ ಮಾತಿನ ಪ್ರಕಾರ ತಾವು ಆ ರೀತಿ ಪತ್ರ ಬರೆದು ಪ್ರಧಾನ ಮಂತ್ರಿಗಳನ್ನು ಕಾಣದೆ ಇರಲು ಬೇರೆ ಬೇರೆ ಕಾರಣಕ್ಕೆ ಆಗದೆ ಇರಬಹುದು, ಇವತ್ತು ತಮ್ಮ ಸರ್ಕಾರದ ಕೈ ಬಲಪಡಿಸುವುದಕ್ಕೋಸ್ಕರ ರಾಜ್ಯದ ಜನರ ಹಿತದೃಷ್ಟಿಯಿಂದ ಸರ್ವಾನುಮತದಿಂದ ಒಂದು ನಿರ್ಣಯ ಮಾಡಿ ಕಳುಹಿಸಿ ಕೊಡೋಣ. ತಮಗೂ ಕೊಂಕಣ ರೈಲ್ವೆ ಆಗಬೇಕೆಂದು ಇದೆ. ಇಲ್ಲದಿದ್ದರೆ ನಾಳೆ ಅನೇಕ ರೀತಿಯ ಒತ್ತಡಕ್ಕೆ ಮಣಿದು, ಅದು ನಿಲ್ಲುತ್ತದೆ ಎಂದು ನಾನು ಹೇಳುವುದಿಲ್ಲ ನಾಗಾರಾಜ್‌ರವರು ಹೇಳಿದಂತೆ ಜನ ಹೋರಾಟ ಮಾಡಿ ಅನೇಕ ವರ್ಷಗಳ ತಪಸ್ಸಿನಿಂದ ಈ ಕೊಂಕಣ ರೈಲ್ವೆ ಮಾರ್ಗ ಮಂಜೂರಾತಿ ಆಗಿ ಕೆಲಸ ಆಗುತ್ತಿದೆ, ಇವತ್ತು ಅದು ನಿಲ್ಲುವುದಕ್ಕೆ ಸಾಧ್ಯ ಇಲ್ಲ. ನಾವು ಆ ರಜಲೂಶನ್ ಮಾಡದಿದ್ದರೆ ಈ ಸ್ಪೇ ಮುಂದುವರಿದರೆ ಆದಷ್ಟು ಬೇಗ ಈ ಕೆಲಸ ಮುಗಿಯುವುದಕ್ಕೆ ತಡ ಆಗುತ್ತದೆ. ರಾಜ್ಯದ ಜನರಿಗೆ ನೀವು ವಂಚನೆ ಮಾಡಿದಂತೆ ಆಗುತ್ತದೆ ಅದನ್ನು ತಡೆಯುವುದಕ್ಕೋಸ್ಕರ ದಯಮಾಡಿ ಒಂದು ರಜಲೂಷನ್ ಮಾಡಿ ಕಳುಹಿಸಿಕೊಡೋಣ. ಅದಕ್ಕೆ ತಾವು ಒಪ್ಪಿಕೊಳ್ಳಬೇಕಾಗುತ್ತದೆ. ಒಂದು ರಜಲೂಶನ್ ಮಾಡಿಬಿಡಿ.

ಶ್ರೀ ಎಸ್ ಎಂ. ಕೃಷ್ಣ:- ನಮ್ಮ ಕೈಯಲ್ಲಿ ಸಾಧ್ಯವಾಗದೇ ಹೋದರೆ ಆಗ ಸದನದ ಮೊರೆ ಹೊಕ್ಕು ಒಂದು ರಜಲೂಶನ್ ಮಾಡಿ ಎಂದು ಹೇಳೋಣ. ಇದು ಪರಿಹಾರ ಮಾಡುವುದಕ್ಕೆ ಈ ಸರ್ಕಾರಕ್ಕೆ ಶಕ್ತಿ ಇದೆ. ಪ್ರಧಾನ ಮಂತ್ರಿಗಳ ಬಗ್ಗೆ ನಮಗೆ ಸಂಪೂರ್ಣವಾದ ವಿಶ್ವಾಸ ಇದೆ. ಅವರ ಸ್ಟೈಲ್ ಆಫ್ ಪಂಕ್ಷನಿಂಗ್ ಬಗ್ಗೆ ನೀವು ಹೇಳಿದಿರಿ. But it has been the most effective way he can put things. ಆದ್ದರಿಂದ ಅದರ ಬಗ್ಗೆ ನಿಮಗೂ ಸಂಶಯ ಬೇಡ. ನಮ್ಮಲ್ಲಿದ್ದಂತಹ ಸಂಶಯ ಕೂಡ ನಿವಾರಣೆ ಆಗಿದೆ. ಆದ್ದರಿಂದ

ಈ ಸರ್ಕಾರದ ಕೈಯಲ್ಲಿ ಸಾಧ್ಯವಾಗದೇ ಹೋದರೆ ಇನ್ನು 8-10 ದಿವಸ ಇರುತ್ತೇವೆ. ನಾವು ಇಲ್ಲಿ ಆಗ ಬೇಕಾದರೆ ನಿರ್ಣಯ ಮಾಡೋಣ. ಆದರೆ ನನ್ನ ಮಟ್ಟಿಗೆ ಹೇಳುವುದಾದರೆ ಯಾವ ಪಕ್ಷದಲ್ಲೂ ಕೂಡ ಕೇಂದ್ರ ಸರ್ಕಾರ ಇದರ ಬಗ್ಗೆ ಓಜರಿಯುತ್ತಿದ ಎಂಬುದನ್ನು ನಾನು ನಂಬುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಇದು ಮುಂದುವರಿಯುತ್ತದೆ ಇದು ಇನ್ನು ಪ್ರಬಲವಾದಂತಹ ಹೆಚ್ಚು ಮಾಹಿತಿ ಬೇಕು ಅಂದರೆ ನಾವು ಇವತ್ತು ದೆಹಲಿಗೆ ಮಾತನಾಡಿ ಅನಂತರ ಬೇಕಾದರೆ ನಾಳೆ ಇದರ ಬಗ್ಗೆ ತಾವು ಪ್ರಸ್ತಾವನೆಯನ್ನು ಮಂಡಿಸಬಹುದು. ಎಂದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಿಳಿಸುತ್ತೇನೆ.

ವಿಷಯ: ಮಹಾಲಕ್ಷ್ಮೀ ಲೇ ಔಟ್ ಲಾಕ್ ಅಪ್‌ನಲ್ಲಿ ನಂಜುಂಡನ ಸಾವು.

ಶ್ರೀ ಕೆ.ಲಕ್ಕಣ್ಣ:- ಸನ್ಮಾನ್ಯ ಅಧ್ಯಕ್ಷರೇ, ಕಳೆದ 24ನೇ ತಾರೀಖು ಮಹಾಲಕ್ಷ್ಮೀ ಲೇ ಔಟ್ ಲಾಕಪ್‌ನಲ್ಲಿ ನಂಜುಂಡ ಎಂಬಾತನು ಸತ್ತಿದ್ದಾನೆ. ಇದು ಆತ್ಮಹತ್ಯೆ ಅಂತ ಹೇಳಿ ಸಂಬಂಧಪಟ್ಟ ಇಲಾಖೆಯವರು ಹೇಳುತ್ತಿದ್ದಾರೆ. ಅವನ ಹೆಂಡತಿ ಸುಮಾರು 40 ದಿವಸಗಳ ಕಾಲ ಸ್ಟೇಷನ್‌ನಲ್ಲಿಟ್ಟುಕೊಂಡು ಹಿಂಸೆ ಕೊಟ್ಟು, ಅವನನ್ನು ಹೊಡೆದು ಸಾಯಿಸಿದ್ದಾರೆ ಅಂತ ಹೇಳಿ ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ. ಅವನು ಯಾವುದೇ ಅಪರಾಧ ಮಾಡಿದ್ದರೂ ಈ ತರಹ ಮಾಡುತ್ತಿರುವುದು ಬಹಳ ಅನ್ಯಾಯ. ಬಹಳವಾಗಿ ಈ ರೀತಿ ಸಾವುಗಳು ಸಂಭವಿಸುತ್ತವೆ. ಸ್ಟೇಶನ್‌ಗಳಲ್ಲಿ ಸಾವುಗಳು ಸಂಭವಿಸುತ್ತಿದ್ದರೂ ಕೂಡ ಸಂಬಂಧಪಟ್ಟ ಸಬ್‌ಇನ್ಸ್‌ಪೆಕ್ಟರ್‌ಗ ಯಾವ ಶಿಕ್ಷೆಯನ್ನು ಕೊಟ್ಟಿಲ್ಲ. ಇದು ಕೊಡದೇ ಇರುವುದರಿಂದ ಈ ಇಲಾಖೆಯವರನ್ನು ಹೇಳುವವರು ಕೇಳುವವರು ಇಲ್ಲದ ಇರುವ ರೀತಿ ಆಗಿದೆ. ಆ ಬಡಪಾಯಿ ಸತ್ತಿದ್ದಾನೆ ಆತನಿಗೆ ಹೆಂಡತಿ ಮತ್ತು ಇಬ್ಬರು ಮಕ್ಕಳು ಇದ್ದಾರೆ, ಅವರು ಇವತ್ತು ಅನಾಥಗಳಾಗಿದ್ದಾರೆ. 40 ದಿವಸ ಸ್ಟೇಶನ್‌ನಲ್ಲಿಟ್ಟುಕೊಂಡು ಅನ್ನ ಆಹಾರಗಳನ್ನು ಕೊಟ್ಟಿಲ್ಲ ಒಂದು ರೀತಿ ಚಿತ್ರಹಿಂಸೆ ಕೊಟ್ಟು ಸಾವಿಗೆ ಕಾರಣಕರ್ತರಾಗಿದ್ದಾರೆ. ಇವತ್ತಿನ ದಿವಸ ಕಾನೂನಿಗೆ ತಿದ್ದುಪಡಿಯನ್ನು ತಂದು, ಸ್ಟೇಶನ್‌ಗಳಲ್ಲಿ ಯಾರೇ ಅಪರಾಧಿಗಳು ಸತ್ತರೆ ನೇರವಾಗಿ ಸಂಬಂಧಪಟ್ಟ ಸಬ್‌ಇನ್ಸ್‌ಪೆಕ್ಟರ್ಸ್ ಕೊಲೆ ಆರೋಪವನ್ನು ಎದುರಿಸಬೇಕು.

ಆ ರೀತಿ ಮಾಡದೇ ಇದ್ದರೆ ಇವತ್ತಿನ ದಿವಸ ಪೋಲೀಸ್ ಸ್ಟೇಶನ್‌ಗಳಲ್ಲಿ ಯಾವುದೇ ಒಂದು ಹಿಡಿತವನ್ನು ಕೂಡ ಮಾಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಸಾವುಗಳು ಸ್ಟೇಶನ್‌ನಲ್ಲಿ ಆಗಿವೆ. ಸಂಬಂಧಪಟ್ಟ ಸಬ್‌ಇನ್ಸ್‌ಪೆಕ್ಟರ್‌ಗೆ ಶಿಕ್ಷೆ ಕೊಟ್ಟಿಲ್ಲ, ಪೇದೆಗಳಿಗೆ ಶಿಕ್ಷೆ ಕೊಟ್ಟಿರು. ಅವರ ಮೇಲೆ ಕೊಲೆಯ ಆರೋಪವನ್ನು ಹಾಕಬೇಕು. ಇಲ್ಲವಾದರೆ ಇದು ಸಾಧ್ಯವಾಗುವುದಿಲ್ಲ. ಎರಡು ತಿಂಗಳ ಹಿಂದೆ ಒಬ್ಬ ಸೀಮೆ ಎಣ್ಣೆ ಮಾರತಕ್ಕಂಥ ಹೆಂಗಸನ್ನು ಕೂಡ ಹಿಡಿದುಕೊಂಡು ಹೋಗಿ ಮೂರು ದಿವಸಗಳ ಕಾಲ ಇಟ್ಟುಕೊಂಡಿದ್ದಾರೆ. ಕೇಳಿದರೆ ಅವಳು ಸೀಮೆ ಎಣ್ಣೆಯನ್ನು ಬ್ಲಾಕ್‌ನಲ್ಲಿ ಮಾರುತ್ತಿದ್ದಳು, ಆಹಾರದ ಕಾಯಿದೆಯಡಿಯಲ್ಲಿ ಇಟ್ಟಿದ್ದೇವೆ ಎಂದು ಹೇಳುತ್ತಾರೆ. ಆ ಹೆಂಗಸನ್ನು ಕೇಳಿದರೆ ಹೇಳುತ್ತಾಳೆ, ಅವರು ಕೇಳಿದಾಗ ಸೀಮೆ ಎಣ್ಣೆ ಕೊಡಲಿಲ್ಲ ಎಂಬ ಕಾರಣಕ್ಕಾಗಿ ಹೀಗೆ ಮಾಡಿದ್ದಾರೆಂದು ಹೇಳುತ್ತಾಳೆ. ಇಂಥ ವಿಚಾರಗಳ ಬಗ್ಗೆ ಇಲಾಖೆಯು ತೀವ್ರತರವಾದ ತನಿಖೆಯನ್ನು ಮಾಡಬೇಕು. ಹಾಗೆಯೇ ಸಂಬಂಧಪಟ್ಟ ಸಬ್‌ಇನ್ಸ್‌ಪೆಕ್ಟರ್, ದಫೇದಾರ್ ಮತ್ತು ಪೋಲೀಸರ ಮೇಲೆ ಕೊಲೆಯ ಆರೋಪವನ್ನು ಹಾಕಿ, ಅರೆಸ್ಟ್ ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರಕಾರಕ್ಕೆ ಒತ್ತಾಯ ಮಾಡುತ್ತೇನೆ.

ಡಾ. ಜೀವರಾಜ್ ಆಳ್ವ:- ಮಾನ್ಯ ಅಧ್ಯಕ್ಷರೇ, ಇದೊಂದು ದೂಜ ವಿಷಯ. ಸಾಧಾರಣವಾಗಿ ಈ ಅರೆಸ್ಟ್, ಪೋಲೀಸ್ ಟಾರ್ಚರ್, ಲಾಕ್‌ಅಪ್ ಡೆಥ್‌ಗಳ ಬಗ್ಗೆ ನಾನು ಮಾತನಾಡುತ್ತಾ ಇಲ್ಲ. ಆದರೆ ನಾವು ನಮ್ಮ ಸಮಾಜದಲ್ಲಿ ಏನೊಂದು ವ್ಯವಸ್ಥೆಯನ್ನು ನಿರ್ಮಾಣ ಮಾಡಿದ್ದೇವೆ ಎಂದರೆ ಯಾರಾದರೂ ಕೊಲೆ ಮಾಡಿದರೆ, ಅವನಿಗೆ ಆಂಟಿಸಿಪೇಟರಿ ಬೇಲ್ ಸಿಗುತ್ತದೆ, ರಾಜಕಾರಣಿಗಳು ಇಡೀ ರಾಜ್ಯದ ಖಜಾನೆಯನ್ನು ದರೋಡೆ ಮಾಡಿದರೆ ಆಂಟಿಸಿಪೇಟರಿ ಬೇಲ್ ಸಿಗುತ್ತದೆ, ಅಧಿಕಾರಿ ವರ್ತುಲದಲ್ಲಿ ಏನಾದರೂ